ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಅಹಮದಾಬಾದ್‌ನಲ್ಲಿ ನೆದರ್‌ಲ್ಯಾಂಡ್ ವಿರುದ್ಧ ಬುಧವಾರ ನಡೆದ ಟಿ-20 ವಿಶ್ವಕಪ್‌ನ ಅಂತಿಮ ಲೀಗ್ ಪಂದ್ಯದಲ್ಲಿ ಅರ್ಧ ಶತಕ (31ಕ್ಕೆ 66 ರನ್) ಗಳಿಸಿದ ಭಾರತದ ಶಿವಂ ದುಬೆ...

19 ಫೆಬ್ರವರಿ 2026 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 335 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಫುಟ್‌ಬಾಲ್‌ನ್ನು ಬಿಸಿಸಿಐ ಕೈಯಲ್ಲಿಡಿ ಸಾಕು » 2


ಮಹಿಳೆಯರು ಸ್ವಾವಲಂಬಿ ಜೀವನದತ್ತ ಸಾಗಬೇಕು » 3


ಸುಮ್ಮನಿರದಿದ್ದರೆ ಬಿಜೆಪಿ ಕಚೇರಿ ಎದುರು ಕಸ ಹಾಕಿಸುವೆ : ಡಿ.ಕೆ.ಶಿ. » 4

# ಇಂದು ಸಾರಿಗೆ ನೌಕರರ ಮುಷ್ಕರ

## ರಾಜ್ಯಾದ್ಯಂತ ಬಸ್ ಸಂಚಾರ ವ್ಯತ್ಯಯ ಸಾಧ್ಯತೆ | ಕರ್ತವ್ಯಕ್ಕೆ ಗೈರಾದರೆ ವೇತನ ಕಡಿತ, ಶಿಸ್ತು ಕ್ರಮದ ಎಚ್ಚರಿಕೆ

• ಪ್ರಜೋದಯ ವರದಿ

**ಬೆಂಗಳೂರು:** ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗುರುವಾರ ಕೆಎಸ್‌ಆರ್‌ಟಿಸಿ ಮತ್ತು ಇತರೆ ಸಾರಿಗೆ ನಿಗಮಗಳ ನೌಕರರ ಯೂನಿಯನ್ ಮುಷ್ಕರ ಹಮ್ಮಿಕೊಂಡಿರುವುದರಿಂದ ರಾಜ್ಯಾದ್ಯಂತ ಸಾರಿಗೆ ಬಸ್ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ.

ಬೆಂಗಳೂರು ಚಲೋಗೆ ಕರೆ ನೀಡಿರುವ ಹಿನ್ನಲೆ ಹೆಚ್ಚಿನ ಸಂಖ್ಯೆಯ ನೌಕರರು ಕರ್ತವ್ಯಕ್ಕೆ ಗೈರಾಗಿ, ಬೆಂಗಳೂರಿನಲ್ಲಿ ಜಮಾಯಿಸುವ ನಿರೀಕ್ಷೆ ಇದೆ. ಈ ನಡುವೆಯೇ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರು, ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ನೌಕರರಿಗೆ ಸೂಚನೆ ನೀಡಿದ್ದಾರೆ. ಪ್ರತಿಭಟನೆಯಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿದ್ದು, ಕರ್ತವ್ಯಕ್ಕೆ ಗೈರಾದಲ್ಲಿ ವೇತನ ಕಡಿತ ಸೇರಿ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದ್ದಾರೆ.

### ಎಸ್ಮಾ ಜಾರಿಗೆ ಚಿಂತನೆ

ಸರ್ಕಾರದ ನಿಯಮ ಉಲ್ಲಂಘಿಸಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ಪಾಲ್ಗೊಳ್ಳುವ ಸಾರಿಗೆ ನೌಕರರ ವಿರುದ್ಧ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ (ಎಸ್ಮಾ) ಜಾರಿ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ. ಮುಷ್ಕರದಲ್ಲಿ ಪಾಲ್ಗೊಳ್ಳುವವರಿಗೆ ನೋ ವರ್ಕ್, ನೋ ಪೇ ಜಾರಿ ಮಾಡಲಾಗಿದೆ.

ಗೈರಾಗುವ ನೌಕರರ ಪಟ್ಟಿಯನ್ನು ಘಟಕವಾರು ಸಿದ್ಧಪಡಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೆಲಸ ಮಾಡದಿದ್ದಾಗ ವೇತನವಿಲ್ಲವೆಂಬ ತತ್ವದಡಿ ಕ್ರಮ ಜರುಗಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿರುವ ಅವರು, ಬಸ್ ಸಂಚಾರದಲ್ಲಿ ವ್ಯತ್ಯಯ ಆಗದಂತೆ ಕ್ರಮ ಕೈಗೊಳ್ಳಬೇಕೆಂದು ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ತುರ್ತು, ಅನಿವಾರ್ಯ ಸಂದರ್ಭ ಹೊರತುಪಡಿಸಿ ನೌಕರರಿಗೆ ಯಾವುದೇ ರಜೆ ನೀಡಬೇಡಿ. ಇದು ವಾರದ ರಜೆ ಅಥವಾ ದೀರ್ಘಾವಧಿ ರಜೆಯಲ್ಲಿರುವವರಿಗೆ ಅನ್ವಯಿಸುವುದಿಲ್ಲ. ಅಗತ್ಯವಿದ್ದರೆ ವಾರದ ರಜೆಯನ್ನು ರದ್ದುಪಡಿಸಿ ಕೆಲಸಕ್ಕೆ ನಿಯೋಜಿಸಬೇಕೆಂದು ನಿರ್ದೇಶನ ನೀಡಿದ್ದಾರೆ.



ಅನಧಿಕೃತವಾಗಿ ಕರ್ತವ್ಯಕ್ಕೆ ಗೈರಾಗುವ ನೌಕರರ ವಿರುದ್ಧ ಹೈಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುತ್ತದೆಂದು ಎಚ್ಚರಿಕೆ ನೀಡಲಾಗಿದೆ. ಆದಾಗ್ಯೂ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಾರಿಗೆ ಸೇವೆ ಭಾಗಶಃ ವ್ಯತ್ಯಯವಾಗುವ ಸಾಧ್ಯತೆ ಇದ್ದು, ಪ್ರಯಾಣಿಕರು ಮುನ್ನೆಚ್ಚರಿಕೆ ವಹಿಸುವಂತೆ ಮನವಿ ಮಾಡಲಾಗಿದೆ.

> ಮುಷ್ಕರಕ್ಕೆ ಸಂಬಂಧಿಸಿದಂತೆ, ಯೂನಿಯನ್ ಜೊತೆ ಮಾತನಾಡುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರಿಗೆ ಹೇಳಿದ್ದೇನೆ. ಹಾಗಾಗಿ, ಮುಷ್ಕರ ನಡೆಯಲ್ಲವೆಂದು ಕೊಂಡಿರುವೆ. ನಾನೂ ಸಹ ಮಾತುಕತೆ ನಡೆಸಿ ಅವರ ಬೇಡಿಕೆಗಳಿಗೆ ಸ್ಪಂದಿಸಿ ಪರಿಹರಿಸಲಾಗುವುದು.
>
> - ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದ್ದು ಹಿಟ್ಲರ್ ಸರ್ಕಾರವಾಗಿದೆ. ಬಿಎಂಟಿಸಿ ನೌಕರರ ಜೊತೆ ಮಾತನಾಡಲು ಡಿಪೋಗೆ ಹೋದರೆ ಪೊಲೀಸರನ್ನು ಕಳುಹಿಸುತ್ತಿದ್ದಾರೆ. ಎರಡು ವರ್ಷದಿಂದ ಎಲ್ಲಾ ಪ್ರಯತ್ನ ಮಾಡಿದ್ದೇವೆ. ನಮ್ಮ ಬೇಡಿಕೆಗಳು ಈಡೇರದಿರಲು ಸಿದ್ದರಾಮಯ್ಯ ಅವರೇ ಕಾರಣ. ವೇತನ ಹಿಂಬಾಕಿ, ವೇತನ ಪರಿಷ್ಕರಣೆಯನ್ನು ಬಡ್ಡಿ ಸಮೇತ ಕೊಡಬೇಕು. ಅಧಿಕಾರಕ್ಕೆ ಬಂದ ಇಷ್ಟು ದಿನವಾದರೂ ನೌಕರರ ಬಗ್ಗೆ ಕಾಳಜಿ ಇಲ್ಲವೆಂದು ಸಾರಿಗೆ ನೌಕರರ ಮುಖಂಡ ಮಂಜುನಾಥ್ ದೂರಿದ್ದಾರೆ.

**ನೌಕರರ ಬೇಡಿಕೆಗಳು**

38 ತಿಂಗಳ ವೇತನ ಬಾಕಿ ಹಣ ನೀಡಬೇಕು, ಸರ್ಕಾರಿ ನೌಕರರಿಗೆ ನೀಡುವ ವೇತನಕ್ಕೆ ಸರಿಸಮಾನ ವೇತನ ನೀಡಬೇಕು, ಕಾರ್ಮಿಕರಿಗೆ ಕಿರುಕುಳ ನಿಲ್ಲಬೇಕು, 2024 ರ ಜನವರಿ 1 ರಿಂದ ವೇತನ ಪರಿಷ್ಕರಣೆ ಜಾರಿಗೊಳಿಸುವುದು ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ ಸಾರಿಗೆ ನೌಕರರು ಆಗ್ರಹಿಸುತ್ತಿದ್ದಾರೆ.

# ಪುರದಮ್ಮ ದೇವಸ್ಥಾನ ಹುಂಡಿ ಹಣ ಅನ್ಯ ಉದ್ದೇಶಕ್ಕೆ ಬಳಸದಿರಿ

## ಮೂಲಸೌಕರ್ಯ ಕಲ್ಪಿಸಲು ಒತ್ತು ನೀಡಿ : ಹೆಚ್.ಪಿ.ಸ್ವರೂಪ್ ಸೂಚನೆ

• ಪ್ರಜೋದಯ ವರದಿ

**ಹಾಸನ:** ಪುರದಮ್ಮ ದೇವಸ್ಥಾನಕ್ಕೆ ಜಿಲ್ಲೆ ಸೇರಿ ಹೊರ ಜಿಲ್ಲೆ, ರಾಜ್ಯದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಕಲ್ಪಿಸುವಂತೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಹಾಸನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಮಸ್ಯೆಗಳ ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಪುರದಮ್ಮ ದೇವಸ್ಥಾನ ಹಣವನ್ನು ಬೇರೆಯ ಯಾವುದೇ ಇತರೆ ಕಾಮಗಾರಿಗಳಿಗೆ ಬಳಕೆ ಮಾಡಬಾರದು, ದೇವಸ್ಥಾನದ ಮೂಲಭೂತ ಸೌಕರ್ಯಗಳಿಗೆ ಹಾಗು ದೇವಸ್ಥಾನ ಅಭಿವೃದ್ಧಿಗೆ ಮಾತ್ರ ಬಳಕೆ ಮಾಡಬೇಕು, ದೇವಸ್ಥಾನದ ಹುಂಡಿ ಎಣಿಕೆಯನ್ನು ಸಂದರ್ಭದಲ್ಲಿ ಸ್ಥಳೀಯರು ಸಮ್ಮುಖದಲ್ಲಿ ಎಣಿಕೆ ಮಾಡಬೇಕೆಂದು ತಿಳಿಸಿದರು.



ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪುರದಮ್ಮ ದೇವಸ್ಥಾನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅನುಕೂಲಕ್ಕಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು, ಕಸದ ನಿರ್ವಹಣೆ ಆಗಬೇಕು, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ದೇವಸ್ಥಾನ ಸಂಬಂಧಿಸಿದಂತೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಸಭೆಯನ್ನು ನಡೆಸುವುದರೊಂದಿಗೆ ದೇವರ ಹೆಸರಿನಲ್ಲಿ ನೀಡುವ ಕಾಣಿಕೆಗಳನ್ನು ಪರಿಶೀಲಿಸಬೇಕು. ದೇವಿಗೆರೆ ದೇವಸ್ಥಾನದಲ್ಲಿ ಆವರಣದಲ್ಲಿ ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆ ಪೂರ್ಣಗೊಸಬೇಕು. ದೇವಿಗೆರೆ ದೇವಸ್ಥಾನದಲ್ಲಿ ಶಿಥಿಲಾವಸ್ಥೆಯಲ್ಲಿದ್ದಲ್ಲಿ ಸರಿಪಡಿಸುವಂತೆ ಹಾಗು ದೇವಸ್ಥಾನದ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಸೂಚಿಸಿದರು.

ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಗರದ ಸುಭಾಷ್ ಚೌಕದಲ್ಲಿರುವ ಮಲ್ಲೇಶ್ವರ ದೇವಸ್ಥಾನದ ಜೀರ್ಣೋದ್ದಾರ ಹಾಗು ದೇವಿಗೆರೆ ದೇವಸ್ಥಾನದಲ್ಲಿರುವ ಪಾರ್ಕಿಂಗ್‌ಗೆ ಟೆಂಡರ್ ಕರೆದು ಪಾರ್ಕಿಂಗ್ ಶುಲ್ಕ ನಿಗದಿ ಪಡಿಸಬೇಕು. ಬಗರ್‌ಹುಕುಂನಲ್ಲಿ ಅರ್ಜಿ ಸಲ್ಲಿಸಿರುವ ಸಂಬಂಧಿಸಿದಂತೆ ಮಂಜೂರಾತಿಗೆ ಕ್ರಮ ವಹಿಸಬೇಕು, ದುರಸ್ತಿ ಸಂಬಂಧಿಸಿದಂತೆ ಕಂದಾಯ ಸಚಿವರು ನಿರ್ದೇಶನದಂತೆ ಕನಿಷ್ಠ 2 ದಾಖಲೆಗಳಿರುವ ಹಾಗು ದಾಖಲೆಗಳು ಇಲ್ಲ

» ನಾಲ್ಕನೇ ಪುಟದಲ್ಲಿ

# ಆಸ್ತಿ ವಿವಾದ : ಕೆಎಸ್‌ಆರ್‌ಟಿಸಿ ನೌಕರನ ಕೊಲೆಯಲ್ಲಿ ಅಂತ್ಯ

## ಪೆಟ್ರೋಲ್ ಸುರಿದು ಕೊಲೆಗೈದ ಸಂಬಂಧಿಕರು, 11 ಜನರ ವಿರುದ್ಧ ಎಫ್‌ಐಆರ್

• ಪ್ರಜೋದಯ ವರದಿ

**ಆಲೂರು:** ಆಸ್ತಿ ವೈಷಮ್ಯದಿಂದ ಸಂಬಂಧಿಕರೇ ವ್ಯಕ್ತಿಯನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕ್ರೂರವಾಗಿ ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ರಾಜನಹಳ್ಳಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಹಾಸನದ ಶಾಂತಿನಗರ ನಿವಾಸಿ, ಕೆಎಸ್‌ಆರ್‌ಟಿಸಿ ಬಸ್ ಚಾಲಕ ಆರ್. ಡಿ.ವೀರಪ್ಪ (58) ಮೃತರು. ಸಂಬಂಧಿಕರಾದ ಮಲ್ಲಮ್ಮ, ಮಹಾದೇವಮ್ಮ, ಹರೀಶ್, ಲೋಕೇಶ್, ಮಹಾದೇವ, ಸತೀಶ್, ಜಯರಾಮ್, ಧರ್ಮ, ಸೌಮ್ಯ, ಪ್ರವೀಣ್ ಎಂಬುವವರ ವಿರುದ್ಧ ಆಲೂರು ಠಾಣೆಯಲ್ಲಿ ಕೊಲೆ ಹಾಗು ಸಾಕ್ಷ್ಯ ನಾಶ ಪ್ರಕರಣ ದಾಖಲಾಗಿದೆ.

ಕೆಎಸ್‌ಆರ್‌ಟಿಸಿ ನೌಕರರಾಗಿದ್ದ ವೀರಣ್ಣ ಹಾಸನದ ಶಾಂತಿ ನಗರದಲ್ಲಿ ಹೆಂಡತಿ ಹಾಗು ಇಬ್ಬರು ಮಕ್ಕಳೊಂದಿಗೆ ವಾಸವಿದ್ದರು. ಇಬ್ಬರೂ ಮಕ್ಕಳು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ವೀರಣ್ಣ ಅವರಿಗೆ ರಾಜನಹಳ್ಳಿಯಲ್ಲಿ ಜಮೀನಿದ್ದು, ಆಗಾಗ ಹೋಗುತ್ತಿದ್ದರು. ವೀರಣ್ಣ ಅವರ ದೊಡ್ಡಪ್ಪ ಬಾಗಲಯ್ಯ ತಮ್ಮ 2 ಎಕರೆ ಜಮೀನನ್ನು ಹಲವು ವರ್ಷಗಳ ಹಿಂದೆ ದಾನವಾಗಿ ವೀರಣ್ಣಗೆ ಬರೆದು ಕೊಟ್ಟಿದ್ದರು. ಆದರೆ, ಬಾಗಲಯ್ಯನ ಹೆಣ್ಣು ಮಕ್ಕಳು ದಾನವಾಗಿ ಕೊಟ್ಟ ಜಮೀನು ತಮಗೆ ಸೇರಬೇಕೆಂದು ತಗಾದೆ ತೆಗೆದಿದ್ದರು. ಈ ಸಂಬಂಧ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಹಲವು ವರ್ಷಗಳ ವಿಚಾರಣೆ ಬಳಿಕ ಆ ಜಮೀನು ವೀರಣ್ಣ ಅವರ ಪರ ಆದೇಶವಾಗಿತ್ತು. ಫೆ.17ರ ಮಂಗಳವಾರ ಆಲೂರು ತಾಲ್ಲೂಕು ನ್ಯಾಯಾಲಯದಲ್ಲಿ ವಿಚಾರಣೆ ಮುಗಿಸಿಕೊಂಡು ಜಮೀನಿಗೆ ತೆರಳಿದ್ದ ವೇಳೆ ವೀರಣ್ಣ ಅವರನ್ನು ಹತ್ಯೆಗೈದಿದ್ದಾರೆ ಎನ್ನಲಾಗಿದೆ.

ಕಾನೂನು ಹೋರಾಟದಲ್ಲಿ ವೀರಣ್ಣ ಗೆದ್ದನೆಂದು ಬಾಗಲಯ್ಯನ



ಪುತ್ರಿಯರಾದ ಮಲ್ಲಮ್ಮ ಹಾಗು ಮಹದೇವಮ್ಮ ತಮ್ಮ ಮಕ್ಕಳೊಂದಿಗೆ ನ್ಯಾಯಾಲಯ ವಿಚಾರಣೆ ಮುಗಿಸಿಕೊಂಡು ವೀರಣ್ಣನನ್ನೇ ಹಿಂಬಾಲಿಸಿದ್ದಾರೆ. ವೀರಣ್ಣ ತನ್ನ ಪಾಲಿಗೆ ಬಂದ ತೆಂಗಿನ ತೋಟದಲ್ಲಿ ನಿಂತಿದ್ದಾಗ ಅಲ್ಲಿಗೆ ತೆರಳಿದ ಎದುರುದಾರರು ಗಲಾಟೆ ಶುರು ಮಾಡಿದ್ದಾರೆ. ಕೊಲೆ ಮಾಡುವ ಉದ್ದೇಶದಿಂದಲೇ ಬಂದಿದ್ದ ಅವರು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಬೆಂಕಿಯ ಕೆನ್ನಾಲಿಗೆಗೆ ತೋಟದ ತೆಂಗಿನ ಗಿಡಗಳು ಸುಟ್ಟು ಕರಕಲಾಗಿದ್ದು, ಪರಿಸ್ಥಿತಿಯ ಗಂಭೀರತೆಯನ್ನು ಒತ್ತಿ ಹೇಳುವಂತಿದೆ.

**ಸಹೋದರನಿಗೆ ಕರೆ ಮಾಡಿದ್ದ ವೀರಣ್ಣ**

ನ್ಯಾಯಾಲಯ ವಿಚಾರಣೆ ಮುಗಿಯುತ್ತಿದ್ದಂತೆ ವೀರಣ್ಣ ಅವರು ತಮ್ಮ ಸಹೋದರ ಮಂಜಯ್ಯ ಅವರಿಗೆ ಕರೆ ಮಾಡಿ ಜಮೀನು ಕಡೆಗೆ ಹೋಗುತ್ತಿದ್ದೇನೆಂದು ಹೇಳಿದ್ದರು. ಎದುರುದಾರರು ಅಲ್ಲಿಯೇ ಇದ್ದಾರೆಂಬ ಮಾಹಿತಿ ತಿಳಿದ ಮಂಜಯ್ಯ ನಾನು ಬರುವವರೆಗೆ ಅಲ್ಲಿಗೆ ಹೋಗಬೇಡ, ವಾಪಾಸ್ ಮನೆಗೆ ಬಾ ಎಂದಿದ್ದರು. ಆದರೂ ವೀರಣ್ಣ ಅಲ್ಲಿಗೆ ತೆರಳಿದ್ದರಿಂದ ಬದುಕೇ ಅಂತ್ಯ ಕಂಡಿದೆ.

ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ತಮ್ಮಯ್ಯ, ಶ್ರೀನಿಧಿ, ಡಿವೈಎಸ್‌ಪಿ ಮಹಂತೇಶ್, ಪಿಐ ಮೋಹನರೆಡ್ಡಿ, ಎಸ್‌ಐ ಪ್ರವೀಣ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ.



### ವೀರಣ್ಣ ನಿಧನಕ್ಕೆ ಸಿಐಟಿಯು ಸಂತಾಪ

ಆರ್.ಡಿ.ವೀರಣ್ಣ ಅವರ ನಿಧನಕ್ಕೆ ಸಿಐಟಿಯು ಸಂತಾಪ ಸೂಚಿಸಿದೆ. ಕೆಎಸ್‌ಆರ್‌ಟಿಸಿ ನೌಕರರ ಫೆಡರೇಷನ್ ಪ್ರಥಮ ಅಧ್ಯಕ್ಷರಾಗಿದ್ದ ಅವರ ಸಿಐಟಿಯುನ ಸಕ್ರಿಯ ಕಾರ್ಯಕರ್ತರಾಗಿದ್ದರು.

ಸಾರಿಗೆ ಇಲಾಖೆ ನೌಕರರ ಸಮಸ್ಯೆಗಳ ವಿರುದ್ಧ ಪ್ರಬಲ ಹೋರಾಟ ನಡೆಸುತ್ತಿದ್ದ ಅವರ ಅಗಲಿಕೆ ತುಂಬಲಾರದ ನಷ್ಟವುಂಟು ಮಾಡಿದೆಯೆಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಹಾಗು ಇತರರು ಸಂತಾಪ ಸೂಚಿಸಿದ್ದಾರೆ.

# ಪತ್ರಕರ್ತರ ಸಂಘದಲ್ಲಿ ಮಧ್ಯಾಹ್ನದ ಊಟಕ್ಕೆ ಚಾಲನೆ

## ನೋಟೆಡ್ ನ್ಯೂಸ್ ಫಲಕ ಅನಾವರಣ | ಮಾದರಿ ಕಾರ್ಯಕ್ಕೆ ಮೆಚ್ಚುಗೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಪ್ರತಿನಿತ್ಯ ಕಾರ್ಯನಿರತ ಪತ್ರಕರ್ತರಿಗೆ ಮಧ್ಯಾಹ್ನದ ಊಟಕ್ಕೆ ಚಾಲನೆ ಹಾಗು ನೋಟೆಡ್ ನ್ಯೂಸ್ ಫಲಕವನ್ನು ಬುಧವಾರ ಅನಾವರಣ ಮಾಡಲಾಯಿತು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಟಿ.ವಿ.ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಮಾದರಿ ಕಾರ್ಯಕ್ಕೆ ಚಾಲನೆ ನೀಡಿದರು.

ಈ ವೇಳೆ ಶಿವಾನಂದ ತಗಡೂರು ಅವರು ಮಾತನಾಡಿ, ಅಧಿಕಾರ ಮುಖ್ಯವಲ್ಲ, ಅವಕಾಶ ಸಿಕ್ಕಾಗ ಏನು ಮಾಡಿದ್ದೇವೆಂಬುದು ಮುಖ್ಯ. ಎಲ್ಲರನ್ನೂ ಒಂದಾಗಿ ತೆಗೆದುಕೊಂಡು ಹೋಗುವ ಕೆಲಸವನ್ನು ಅಧ್ಯಕ್ಷರಾದವರು ಮಾಡಬೇಕು. ಸಂಘಟನೆಯಿಂದ ಯಾರೂ ದೂರ ಉಳಿಯಬೇಡಿ, ಸಂಘ, ಸಂಘಟನೆ ಬಹಳ ಮುಖ್ಯವೆಂದರು.

ರಾಜ್ಯದ ಒಂದೆರಡು ಜಿಲ್ಲೆಗಳಲ್ಲಿ ಮಧ್ಯಾಹ್ನದ ಊಟ ನೀಡುವ



### ಎಲ್ಲಾ ಪತ್ರಕರ್ತರಿಗೂ ಊಟದ ವ್ಯವಸ್ಥೆ

ಹಿಂದೆ ನಾವು ಹಸಿವಿನಿಂದ ಕೆಲಸ ಮಾಡುತ್ತಿದ್ದೆವು. ಈಗಿನ ಯುವಕರಿಗೆ ಆ ಸಮಸ್ಯೆ ಎದುರಾಗದಂತೆ ಜಿಲ್ಲೆಯ ಎಲ್ಲಾ ಪತ್ರಕರ್ತರಿಗೆ ಪ್ರತಿದಿನ ಸಂಘದಲ್ಲಿ ಊಟದ ವ್ಯವಸ್ಥೆ ಮಾಡಿದ್ದೇವೆ. ಊಟಕ್ಕೂ ಮುಂಚೆ ಮಾಹಿತಿ ನೀಡಿದರೆ ಸಿದ್ಧಪಡಿಸಲಾಗುವುದೆಂದು ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ತಿಳಿಸಿದರು. ಚುನಾವಣೆ ನಂತರ ಸಂಘದಲ್ಲಿ ಸಾಂಸ್ಕೃತಿಕ, ಕ್ರೀಡೆ ಹಾಗು ಕಟ್ಟಡ ನಿರ್ವಹಣಾ ಸಮಿತಿಗಳು ರಚಿಸಿ, ಕಾರ್ಯಕಾರಿ ಸಮಿತಿಯಲ್ಲಿ ಒಪ್ಪಿಗೆ ಪಡೆಯಲಾಗಿದೆ. ಈ ಸಮಿತಿಗಳು ಉತ್ತಮವಾದ ಕೆಲಸ ಮಾಡುತ್ತಿವೆ ಎಂದು ಅವರು, ಈಗ ಪ್ರತಿಭಾವಂತ ಬರಹಗಾರರಿಗೆ ಪ್ರೋತ್ಸಾಹ ನೀಡಲು ನೋಟೆಡ್ ನ್ಯೂಸ್ ಬೋರ್ಡ್ ಅನಾವರಣಗೊಳಿಸಲಾಗಿದೆ ಎಂದು ಹೇಳಿದರು.

ಕಾರ್ಯ ಆರಂಭವಾಗಿ ನಂತರ ನಿಂತು ಹೋಗಿದೆ. ನಗರದಲ್ಲಿ ನಿರಂತರವಾಗಿ ನಡೆಯಲಿ. ಇದೇ ಕಾರಣಕ್ಕೆ ನಮ್ಮ ಜಿಲ್ಲೆ ರಾಜ್ಯದಲ್ಲಿ ವಿಭಿನ್ನ, ಎಲ್ಲಾ ವಿಚಾರದಲ್ಲೂ ಮಾದರಿ ಎನಿಸಿದೆ. ಪ್ರೀತಿ, ಜಗಳ ಎಲ್ಲದಕ್ಕೂ ಇಲ್ಲಿ ಅವಕಾಶವಿದೆ. ಹಾಗಾಗಿ ನಮ್ಮ ಸಂಘ ಎಲ್ಲಾ ವಿಚಾರದಲ್ಲೂ ಮಾದರಿ. ಡಿವಿಜಿ ಅವರು ಹುಟ್ಟು ಹಾಕಿದ ಸಂಘದಲ್ಲಿ ಪ್ರಸ್ತುತ 10 ಸಾವಿರ ಸದಸ್ಯರಿದ್ದಾರೆ. ಟ್ರೇಡ್ ಯೂನಿಯನ್ ಕಾಯ್ದೆಯಡಿ ನೋಂದಣಿಯಾಗಿರುವ ಒಂದೇ ಒಂದು ಸಂಘ ಎಂದರೆ ಅದು ನಮ್ಮ ಕೆಯೂಡಬ್ಲ್ಯೂಜೆ ಎಂದರು.

30 ವರ್ಷಗಳ ಹೋರಾಟದ ಫಲವಾಗಿ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ವ್ಯವಸ್ಥೆಯೂ ಶೀಘ್ರವಾಗಿ ಸಾಕಾರಗೊಳ್ಳಲಿದ್ದು, ಅರ್ಹರು ಇದರ ಲಾಭ ಪಡೆಯಿರಿ ಎಂದ ಅವರು, ಮಾ.28,29 ರಂದು ಬೀದರ್ ನಲ್ಲಿ ಪತ್ರಕರ್ತರ ರಾಜ್ಯ ಸಮ್ಮೇಳನ ನಡೆ ಯುತ್ತಿದ್ದು, ಎಲ್ಲರೂ ಭಾಗಿಯಾಗುವಂತೆ ಮನವಿ ಮಾಡಿದರು.

ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಮಾತನಾಡಿ, ತಾಲ್ಲೂಕು ಉಸ್ತುವಾರಿಗಳು ಪ್ರಾಮಾಣಿಕ, ಸಂಘಟಿತ ಕೆಲಸ ಮಾಡುತ್ತಿದ್ದಾರೆ. ಈಗ ಮಧ್ಯಾಹ್ನದ ಊಟದ ವ್ಯವಸ್ಥೆ ಶುರುವಾಗಿದೆ. ಸಂಘದಲ್ಲಿ ಹಿಂದೆಯೂ ಇತ್ತು, ಆಗ ಹೊರಗಿನಿಂದ ಊಟ ತರಿಸಲಾಗುತ್ತಿತ್ತು. ಈಗ ಸಂಘದಲ್ಲೇ ಬಿಸಿಯಾಗಿ ಮಾಡಿಸಲಾಗುತ್ತಿದೆ, ಎಲ್ಲರೂ ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.


ರಾಜ್ಯ ಕಾರ್ಯಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್ ಮಾತನಾಡಿ, ಚುನಾವಣೆ ನಂತರ

# ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿ ಶಶಿಧರ್ ನೇಮಕ

• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ಜಿಲ್ಲಾ ಕಾರ್ಯಾ ಧ್ಯಕ್ಷರನ್ನಾಗಿ ಅರಸೀಕೆರೆ ಮುಖಂಡ ಜಿ.ಬಿ.ಶಶಿಧರ್ ಅವರನ್ನು ನೇಮಕ ಮಾಡಲಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬುಧವಾರ ಬೆಂಗಳೂರಿನಲ್ಲಿ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು. 2018ರ ವಿಧಾನ ಸಭಾ ಚುನಾವಣೆಯಲ್ಲಿ ಅರಸೀಕೆರೆ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಜಿ.ಬಿ.ಶಶಿಧರ್ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಮುಂಬರುವ ಸ್ಥಳೀಯ ಹಾಗು ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸುತ್ತಾರೆಂಬ ವಿಶ್ವಾಸವಿದೆ



ಎಂದು ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

ಸಂಸದ ಶ್ರೇಯಸ್ ಪಟೇಲ್, ಸಕಲೇಶಪುರ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ಮತ್ತಿತರರಿದ್ದರು.

# ನಶಾ ಮುಕ್ತ ಸಮಾಜ ನಿರ್ಮಾಣಕ್ಕೆ ಬೃಹತ್ ಜಾಗೃತಿ ಜಾಥಾ

## ವಾಕಥಾನ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಗಣ್ಯರು ಭಾಗಿ

• ಪ್ರಜೋದಯ ವರದಿ

**ಹಾಸನ:** ನಶಾಮುಕ್ತ ಸಮಾಜ ನಿರ್ಮಾಣದ ಮಹತ್ವ ಸಾರುವ ಉದ್ದೇಶದಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ ಜಾಗೃತಿ ಜಾಥಾ ಹಾಗು ವಾಕಥಾನ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗು ಧಾರ್ಮಿಕ ಮುಖಂಡರು ಭಾಗವಹಿಸಿ ನಶೆ ಬಿಡಿ,

» ನಾಲ್ಕನೇ ಪುಟದಲ್ಲಿ



# ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ ಜಾರಿ

• ಪ್ರಜೋದಯ ವರದಿ

**ಹಾಸನ :** ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಫೆ.28 ರಿಂದ ಮಾ.17 ರವರೆಗೆ ಹಾಸನ ವ್ಯಾಪ್ತಿಯ 33 ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯ ಜೆರಾಕ್ಸ್, ಸೈಬರ್/ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುಬೇಕು. ಪರೀಕ್ಷಾರ್ಥಿಗಳು, ಪರೀಕ್ಷೆ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು, ಸಿಬ್ಬಂದಿ ಹೊರತುಪಡಿಸಿ ಇತರರ ಪ್ರವೇಶವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಲತಾಕುಮಾರಿ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದ್ದಾರೆ.

## ಫೆ.23 ರಂದು ಆಯವ್ಯಯ ಪೂರ್ವಭಾವಿ ಸಭೆ

**ಹಾಸನ :** ಹೊಳೆನರಸೀಪುರ ಪುರಸಭೆಯ ಹೆಚ್.ಡಿ.ದೇವೇಗೌಡರ ಸಭಾಂಗಣದಲ್ಲಿ ಫೆ.23 ರಂದು ಬೆಳಿಗ್ಗೆ 10 ಗಂಟೆಗೆ ಪುರಸಭೆಯ ಆಡಳಿತಾಧಿಕಾರಿಗಳು, ಉಪ ವಿಭಾಗಾಧಿಕಾರಿ ಜಗದೀಶ ಗಂಗಣ್ಣನವರ್ ಅಧ್ಯಕ್ಷತೆಯಲ್ಲಿ ಅಂದಾಜು ಆಯ ವ್ಯಯ ಪೂರ್ವಭಾವಿ ಸಭೆ ನಡೆಯಲಿದೆ.

## ಬ್ರಿಟಿಷ್ ಆಡಳಿತಾವಧಿಯಲ್ಲಿ ಜ್ಞಾನ ದೇಗುಲ ಆರಂಭ | ಇಂದು ಶತಮಾನೋತ್ಸವ

# ಹಳ್ಳಿಮೈಸೂರು ಪಿ.ಎಂ.ಶ್ರೀ. ಶಾಲೆಗೆ 126ರ ಸಂಭ್ರಮ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದ ಪಿ.ಎಂ.ಶ್ರೀ. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆರಂಭವಾಗಿ 126 ವರ್ಷಗಳು ಪೂರೈಸಿದ್ದು, ಫೆ.19ರ ಗುರುವಾರ ಶತಮಾನೋತ್ಸವ ಹಮ್ಮಿಕೊಳ್ಳಲಾಗಿದೆ.

ಬ್ರಿಟಿಷರ ಆಡಳಿತ ಅವಧಿಯಲ್ಲಿ ಅಂದರೆ 1899ರಲ್ಲಿ ಹಳ್ಳಿಮೈಸೂರಿನಲ್ಲಿ ಶಾಲೆ ಪ್ರಾರಂಭವಾಯಿತು. ಬರೋಬ್ಬರಿ 126 ವರ್ಷಗಳನ್ನು ಪೂರೈಸಿರುವ ಶಾಲೆ ಜ್ಞಾನದ ಹೆಮ್ಮರವಾಗಿ ಬೆಳೆದು ನಿಂತಿದೆ. ಸ್ವಾತಂತ್ರ್ಯ ಪೂರ್ವದ ಆ ಹಳೆಯ ಕಂಪನ್ನು ಇಂದಿಗೂ ಉಳಿಸಿಕೊಂಡಿರುವ ಶಾಲೆಯ ಗೋಡೆಗಳು ಹಲವರ ಬದುಕಿನ ಯಶೋಗಾಥೆಗಳಿಗೆ ಸಾಕ್ಷಿಯಾಗಿವೆ. ಹಳ್ಳಿಮೈಸೂರು ಮತ್ತು ಸುತ್ತಲಿನ ಗ್ರಾಮಗಳ ಅದೆಷ್ಟೋ ಪ್ರತಿಭೆಗಳಿಗೆ ಈ ಶಾಲೆ ಭದ್ರ ಅಡಿಪಾಯ ಹಾಕಿಕೊಟ್ಟಿದೆ. ಕಾಲಕ್ಕೆ ತಕ್ಕಂತೆ ತನ್ನನ್ನು ತಾನು ನವೀಕರಿಸಿಕೊಳ್ಳುತ್ತಾ ಬಂದಿದೆ. ಒಂದು ಸಣ್ಣ ಕಟ್ಟಡದಲ್ಲಿ ಕೆಲವೇ ವಿದ್ಯಾರ್ಥಿಗಳೊಂದಿಗೆ ಆರಂಭವಾದ ಸರ್ಕಾರಿ ಶಾಲೆ ಕಾಲಕ್ರಮೇಣ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣದ ಬೆಳಕು ಹಂಚಿ, ಲಕ್ಷಾಂತರ ಕುಟುಂಬಗಳ ಬದುಕಿನಲ್ಲಿ ಬದಲಾವಣೆಯ ದೀಪ ಹಚ್ಚಿದೆ. ಹಳ್ಳಿಮೈಸೂರು ಮತ್ತು ಸುತ್ತಲಿನ ಗ್ರಾಮಗಳ ಸಾಮಾಜಿಕ, ಸಾಂಸ್ಕೃತಿಕ ಹಾಗು ಆರ್ಥಿಕ ಪ್ರಗತಿಗೆ ನೆರವಾಗಿದೆ.



**ಅಕ್ಷರ ಕಲಿಸಿದ ಗುರುಗಳ ಸ್ಮರಣೆ**

ಈ ಶಾಲೆಯಲ್ಲಿ ಅನೇಕ ಶಿಕ್ಷಕರು ತಮ್ಮ ಜೀವನವನ್ನೇ ವಿದ್ಯಾರ್ಥಿಗಳ ಬೆಳವಣಿಗೆಗೆ ಸಮರ್ಪಿಸಿ, ಶಿಸ್ತು, ಮೌಲ್ಯಾಧಾರಿತ ಶಿಕ್ಷಣ ಹಾಗು ವ್ಯಕ್ತಿತ್ವ ವಿಕಾಸಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಅವರ ತ್ಯಾಗ ಮತ್ತು ಪರಿಶ್ರಮದಿಂದ ವಿದ್ಯಾಲಯ ಇಂದಿಗೂ ತನ್ನ ಗೌರವ ಉಳಿಸಿಕೊಂಡಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹಳೆಯ ವಿದ್ಯಾರ್ಥಿಗಳು ಇಂದು ವೈದ್ಯರು, ಇಂಜಿನೀಯರ್, ವಕೀಲರು, ಶಿಕ್ಷಕರು, ಸರ್ಕಾರಿ ಅಧಿಕಾರಿಗಳು, ರೈತ ನಾಯಕರು ಹಾಗು ಉದ್ಯಮಿಗಳಾಗಿ ಸಮಾಜದಲ್ಲಿ ಹೆಸರು ಮಾಡಿದ್ದಾರೆ. ಅವರ ಸಾಧನೆಗಳು ಶಾಲೆಯ ಶ್ರೇಷ್ಠತೆಯನ್ನು ಸಾರುತ್ತವೆ. ಆದ್ದರಿಂದ ಗುರುವಾರದ ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಗೌರವ ಸಮರ್ಪಿಸಲಾಗುತ್ತಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎ.ಮಂಜು ವಹಿಸಲಿದ್ದು, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಸಂಸದ ಶ್ರೇಯಸ್ ಪಟೇಲ್ ಹಾಗು ಗಣ್ಯರು ಪಾಲ್ಗೊಳ್ಳಲಿದ್ದಾರೆ.

**ಅಭಿವೃದ್ಧಿಯತ್ತ ಶಾಲೆ ಹೆಜ್ಜೆ**

1899ರಲ್ಲಿ ಆರಂಭವಾದ ಶಾಲೆ 1942ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಪದೋನ್ನತಿ ಹೊಂದಿತು. ಶಾಲೆ ಆರಂಭವಾದಾಗಿನಿಂದ ಇಲ್ಲಿಯವರೆಗೆಅಂದಾಜು 20 ಸಾವಿರ ಮಕ್ಕಳು ಇಲ್ಲಿ ವ್ಯಾಸಂಗ ಮಾಡಿದ್ದಾರೆ. ರಾಜ್ಯಸಭೆ ಮಾಜಿ ಸದಸ್ಯ ಹೆಚ್.ಕೆ. ಜವರೇಗೌಡ, ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಜಿ.ಪಿ.ದೇವರಾಜ್, ಮುಖ್ಯಮಂತ್ರಿ ವೈದ್ಯಕೀಯ ಸಲಹೆಗಾರ ಡಾ।। ಹೆಚ್ . ರ ವಿ ಕು ಮಾ ರ್ , ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಸೇರಿ ಅನೇಕರು ಇಲ್ಲಿ ವ್ಯಾಸಂಗ ಮಾಡಿ ಉನ್ನತ ಸ್ಥಾನ ಅಲಂಕರಿಸಿದ್ದಾರೆ.

2025ರಲ್ಲಿ ಪಿ.ಎಂ.ಶ್ರೀ. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಅಭಿವೃದ್ಧಿಗೊಂಡಿದೆ. ಆಧುನಿಕ ತರಗತಿ ಕೊಠಡಿ, ಡಿಜಿಟಲ್ ಬೋಧನಾ ವಿಧಾನ, ಕಂಪ್ಯೂಟರ್ ಶಿಕ್ಷಣ, ಗ್ರಂಥಾಲಯ ಹಾಗು ಕ್ರೀಡಾ ಸೌಲಭ್ಯಗಳೊಂದಿಗೆ ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ಒದಗಿಸಲಾಗುತ್ತಿದೆ. ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಗ್ರಾಮೀಣ ಮಕ್ಕಳಿಗೆ ನಗರ ಮಟ್ಟದ ಅವಕಾಶಗಳನ್ನು ಒದಗಿಸುವ ಕಾರ್ಯ ನಡೆಯುತ್ತಿದೆ.

ಸುಸಜ್ಜಿತ ಕ್ರೀಡಾಂಗಣವೂ ಮಕ್ಕಳ ದೈಹಿಕ ಬೆಳವಣಿಗೆಗೆ ಪೂರಕವಾಗಿದೆ. ಶಾಲೆಯ ಸುತ್ತಲೂ ಗಿಡಗಳನ್ನು ಬೆಳೆಸಿದ್ದು, ವಾತಾವರಣ ತಂಪಾಗಿದೆ. ದೊಡ್ಡ ಆಟದ ಮೈದಾನ ಇರುವುದರಿಂದ ಕ್ರೀಡಾಕೂಟಗಳು ಇಲ್ಲಿ ನಡೆಯುತ್ತವೆ. ಮಕ್ಕಳ ಹಿತದೃಷ್ಟಿಯಿಂದ ಅಗತ್ಯಕ್ಕೆ ತಕ್ಕಷ್ಟು ಸಿಸಿಟಿವಿ ಕ್ಯಾಮರಾ ಸಹ ಅಳವಡಿಸಲಾಗಿದೆ. ಸರ್ಕಾರಿ ಶಾಲೆಗಳೆಂದರೆ ಅಸಡ್ಡೆ ತೋರುವ ಪ್ರಸ್ತುತ ದಿನಗಳಲ್ಲಿ ಯಾವ ಖಾಸಗಿ ಶಾಲೆಗೂ ಕಡಿಮೆ ಎಲ್ಲ ಎನ್ನುವಂತೆ ಪಿ.ಎಂ.ಶ್ರೀ. ಶಾಲೆ ಏಳಿಗೆ ಕಂಡಿದೆ.

# ಹನಿಟ್ರ್ಯಾಪ್ ಗ್ಯಾಂಗ್‌ನ ನಾಲ್ವರ ಬಂಧನ





- ಬಲವಂತವಾಗಿ ಅತ್ಯಾಚಾರ ಪ್ರಕರಣ ದಾಖಲಿಸಲು ಮಹಿಳೆಗೆ ಕಿರುಕುಳ
- ವಕೀಲೆ, ಲ್ಯಾಬ್ ಟೆಕ್ನಿಷಿಯನ್ ಕಿಂಗ್‌ಪಿನ್

• ಪ್ರಜೋದಯ ವರದಿ

**ಹಾಸನ:** ಬಡ ಹಾಗು ಅಸಹಾಯಕ ಮಹಿಳೆಯರನ್ನು ಗುರಿಯಾಗಿಸಿಕೊಂಡು ಹನಿಟ್ರ್ಯಾಪ್ ಮೂಲಕ ಹಣ ವಸೂಲಿ ಮಾಡುತ್ತಿದ್ದ ಖತರ್ನಾಕ್ ಗ್ಯಾಂಗೊಂದನ್ನು ಹೊಳೆನರಸೀಪುರದಲ್ಲಿ ಪೊಲೀಸರು ಬಂಧಿಸಿದ್ದಾರೆ. ವಕೀಲೆ ನಾಗಲಕ್ಷ್ಮೀ, ಆಕೆಯ ಪತಿ ಸಿದ್ದೀಕ್, ಖಾಸಗಿ ಲ್ಯಾಬ್ ಟೆಕ್ನಿಷಿಯನ್ ಧರ್ಮರಾಜು ಅಲಿಯಾಸ್ ಫಣಿ ಸೇರಿ ನಾಲ್ವರನ್ನು ಬಂಧಿಸಲಾಗಿದೆ.


**ಏನಿದು ಪ್ರಕರಣ**

ಫೆ.13ರಂದು ನೊಂದ ಮಹಿಳೆಯ ಮನೆಗೆ ಪರಿಚಯಸ್ಥ ವ್ಯಕ್ತಿಯೊಬ್ಬರು ಭೇಟಿ ನೀಡಿದ್ದರು. ಈ ವೇಳೆ ನೆರೆ ಮನೆಯ ಮಹಿಳೆ ಆ ವ್ಯಕ್ತಿಯ ಫೋಟೋ ತೆಗೆದು ನಾಗಲಕ್ಷ್ಮೀಗೆ ಕಳುಹಿಸಿದ್ದಳು ಎನ್ನಲಾಗಿದೆ. ಈ ವಿಚಾರವನ್ನು ಆಧಾರವಾಗಿಸಿಕೊಂಡು ನಾಗಲಕ್ಷ್ಮೀ ಹಾಗು ಆಕೆಯ ತಂಡ ನೊಂದ ಮಹಿಳೆಯ ಮನೆಗೆ ತೆರಳಿ, ಮನೆಗೆ ಬಂದಿದ್ದ ವ್ಯಕ್ತಿಯ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಲು ಒತ್ತಾಯಿಸಿದ್ದರೆಂದು ಆರೋಪಿಸಲಾಗಿದೆ.

ಅತ್ಯಾಚಾರ ದೂರು ನೀಡಲು ಮಹಿಳೆ ನಿರಾಕರಿಸಿದಾಗ, ಹೊಳೆನರಸೀಪುರದಲ್ಲಿ ಖಾಸಗಿ ಲ್ಯಾಬ್ ನಡೆಸುತ್ತಿರುವ ಫಣಿಯನ್ನು ಕರೆಸಿಕೊಂಡು ಬಲವಂತವಾಗಿ ಸಂತ್ರಸ್ತ ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ತಿಳಿದು ಬಂದಿದೆ. ಈ ವೇಳೆ ಮಹಿಳೆ

» ಮೂರನೇ ಪುಟದಲ್ಲಿ

# ಫುಟ್‌ಬಾಲ್‌ನ್ನು ಬಿಸಿಸಿಐ ಕೈಯಲ್ಲಿಡಿ ಸಾಕು



- ಫುಟ್‌ಬಾಲ್‌ನಲ್ಲಿ ಮೂಲೆಮೂಲೆಗಳಿಂದ ಪ್ರತಿಭೆಗಳನ್ನು ಹೆಕ್ಕುವ ಸಾಹಸಕ್ಕೆ ಎಐಎಫ್‌ಎಫ್ ಎಂದೂ ಕೈಹಾಕಿಲ್ಲ. ಆ ಬೇಸರ ಭಾರತದಲ್ಲಿನ ಪ್ರತಿ ಫುಟ್‌ಬಾಲಿಗನಿಗೂ ಇದೆ. ಅಲ್ಲಿ ಆಡುವುದರಿಂದ ಆರ್ಥಿಕವಾಗಿ ಅವರು ಸುಭದ್ರಗೊಳ್ಳುತ್ತಾರೆ ಎಂದಂತೂ ಹೇಳಲು ಸಾಧ್ಯವೇ ಇಲ್ಲ. ಭಾರತೀಯ ಫುಟ್‌ಬಾಲ್ ತಂಡವನ್ನು ಬಿಸಿಸಿಐಗೆ ಕೈಯಲ್ಲಿಡಲು ಸಾಧ್ಯವಿಲ್ಲವೇ?

ಮನೋಕಾಮ

ಜಗತ್ತಿನ ಜನಪ್ರಿಯ ಕ್ರೀಡೆಯಾದ ಫುಟ್‌ಬಾಲ್‌ನ ಆಡಳಿತ ಒಂದು ವೇಳೆ ಭಾರತದಲ್ಲಿ ಬಿಸಿಸಿಐ ಕೈಗೆ ಸಿಕ್ಕಿದರೆ? ಬಹುಶಃ ಈ ಯೋಚನೆ ಭಾರತೀಯ ಕ್ರೀಡಾಭಿಮಾನಿಗಳಿಗೆ ಬಂದಿರುತ್ತದೆ. ನಿಮಗೂ ಬಂದಿರಬಹುದು. ವಿಶ್ವದ ಬಲಿಷ್ಠ ಕ್ರೀಡಾಸಂಸ್ಥೆಗಳಿಗಂತೂ ಖಚಿತವಾಗಿ ಬಂದಿರುತ್ತದೆ.

ಅಕಸ್ಮಾತ್ ಭಾರತದಲ್ಲಿ ಫುಟ್ಬಾಲ್ ಆಟವನ್ನು ಬಿಸಿಸಿಐ ನಿಯಂತ್ರಿಸಿದರೆ ಇನ್ನು ಒಂದು ಹತ್ತು ವರ್ಷಗಳಲ್ಲಿ, ಭಾರತೀಯ ಫುಟ್‌ಬಾಲ್ ತಂಡ ಜಗತ್ತಿನಲ್ಲಿ ಮಾಡುವ ಮೋಡಿಯನ್ನೊಮ್ಮೆ ಹಾಗೆಯೇ ಯೋಚಿಸಿ ನೋಡಿ... ಯಾವುದೇ ಕ್ರೀಡೆಯನ್ನು ಭಾರತೀಯರು ಹಚ್ಚಿಕೊಂಡರೆ ಆಟಗಾರರು ಒಮ್ಮೆಲೇ ದೇವರ ಸ್ಥಾನಕ್ಕೇರುತ್ತಾರೆ.

ಹಣವಂತೂ ಹೊಳೆಯಂತೆ ಧಾರೆಧಾರೆಯಾಗಿ ಹರಿದು ಬರುತ್ತದೆ. ಅದರಲ್ಲೂ 211 ದೇಶಗಳಲ್ಲಿ ಜನಪ್ರಿಯವಾಗಿರುವ ಫುಟ್‌ಬಾಲ್‌ನಲ್ಲಿ ಭಾರತೀಯರು ಮಿನುಗಿದರೆ ಅಷ್ಟೂ ದೇಶಗಳಲ್ಲಿ ನಮ್ಮ ತಾರೆಯರು ದಂತಕಥೆಗಳಾಗಿರುತ್ತಾರೆ. ಲಯೋನೆಲ್ ಮೆಸ್ಸಿ, ಕ್ರಿಸ್ಟಿಯಾನೋ ರೊನಾಲ್ಡೋ, ಹ್ಯಾರಿ ಬ್ರೂಕ್ ಬಗ್ಗೆ ಭಾರತದ ಪುಟ್ಟ ಮಕ್ಕಳಿಗೂ ಗೊತ್ತಿದೆ.

ಭಾರತೀಯ ಆಟಗಾರನೊಬ್ಬ ವಿಶ್ವದಲ್ಲಿ ಮನೆಮಾತಾಗುವ ಗಳಿಗೆಯನ್ನು ನಿಮ್ಮ ಮನಸ್ಸಿನಲ್ಲಿ ತಂದುಕೊಳ್ಳಿ. ಕ್ರಿಕೆಟ್‌ನಲ್ಲಿ ವಿಶ್ವದ ಅತ್ಯಂತ ಬಲಿಷ್ಠ ತಂಡವನ್ನು ಕಟ್ಟಿ ನಿಲ್ಲಿಸಿರುವ ಬಿಸಿಸಿಐಗೆ ಫುಟ್‌ಬಾಲ್‌ನಲ್ಲಿ ಅಂತಹದ್ದೊಂದು ವಿಸ್ಮಯವನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲವೇ? ಭಾರತದಲ್ಲಿರುವ ಜನಬಲ, ಹಣಬಲ, ಅಭಿಮಾನಬಲದಿಂದ ಒಂದು 10 ವರ್ಷದ ಯೋಜನೆಯಲ್ಲಿ ಅದನ್ನು ಮಾಡಲು ಸಾಧ್ಯವಿದೆ.

ಹಾಗೇನಾದರೂ ಆದರೆ ಕ್ರಿಕೆಟ್‌ನ ಪರಿಸ್ಥಿತಿ ಏನಾಗಬಹುದು? ಇಲ್ಲೀಗ ದೇವರ ಸ್ಥಾನದಲ್ಲಿ ಭದ್ರವಾಗಿ ಕುಳಿತಿರುವ ಕ್ರಿಕೆಟಿಗರು ಸಹಜವಾಗಿ 2ನೇ ಸ್ಥಾನಕ್ಕಿಳಿಯುತ್ತಾರೆ. ಬಹುಶಃ ಪ್ರಸ್ತುತ ಭಾರತದಲ್ಲಿ ಮಹಿಳಾ ಕ್ರಿಕೆಟಿಗರಿಗೆ ಯಾವ ಸ್ಥಾನಮಾನವಿದೆಯೋ, ಅದು ಪುರುಷ ಕ್ರಿಕೆಟಿಗರಿಗೆ ಸಿಕ್ಕಬಹುದು.

ಫುಟ್‌ಬಾಲ್ ಆಟಗಾರರ ವಿಶ್ವಪ್ರಕಾಶ ಕ್ರಿಕೆಟಿಗರಿಗೆ ಮಂಕು ಹಿಡಿಸುತ್ತದೆ. ಈಗ ವಿಶ್ವದ ಪ್ರಬಲ ಕ್ರಿಕೆಟ್ ತಂಡ ಭಾರತ. ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐ. ಭಾರತ ನೀಡುವ ಆದಾಯವೇ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಮೂಲಶಕ್ತಿ. ಇಲ್ಲಿಂದ ಹರಿಯುವಿಕೆ ನಿಂತರೆ ಐಸಿಸಿಯ ಕಾಲಚಕ್ರವೇ ಸ್ಥಗಿತಗೊಳ್ಳುತ್ತದೆ! ಐಸಿಸಿಯಲ್ಲಿರುವ ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ 110. ಇದರಲ್ಲಿ ಪೂರ್ಣ ಸದಸ್ಯ ರಾಷ್ಟ್ರಗಳು 12. ಬಾಕಿ 98 ಸಹ ಸದಸ್ಯ ರಾಷ್ಟ್ರಗಳು.



ಪೂರ್ಣ ಸದಸ್ಯ ರಾಷ್ಟ್ರಗಳಲ್ಲಿ ಈಗ ಗುಣಮಟ್ಟದ ಕ್ರಿಕೆಟ್ ಆಡುತ್ತಿರುವುದು ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ದ.ಆಫ್ರಿಕಾ ಮಾತ್ರ. ಪಾಕಿಸ್ತಾನ ನಿಧಾನಕ್ಕೆ ವೆಸ್ಟ್ ಇಂಡೀಸ್ ಮಾದರಿಯಲ್ಲಿ ಇತಿಹಾಸವನ್ನೇ ಪದೇಪದೇ ಮೆಲುಕು ಸ್ಥಿತಿಗೆ ತಲುಪುತ್ತಿದೆ. ಶ್ರೀಲಂಕಾ ಈಗಾಗಲೇ ಬಾಂಗ್ಲಾ ಮಟ್ಟಕ್ಕಿಳಿದಿದೆ. ಅರ್ಥಾತ್ ಈ ತಂಡಗಳೆಲ್ಲ ಪೂರ್ಣ ದುರ್ಬಲಗೊಂಡಿವೆ.

ಅಫ್ಘಾನಿಸ್ತಾನ, ಬಾಂಗ್ಲಾ, ಜಿಂಬಾಬ್ವೆ, ಐರ್ಲೆಂಡ್ ತಂಡಗಳನ್ನು ಕರ್ನಾಟಕ ರಣಜಿ ತಂಡಕ್ಕೂ ಹೋಲಿಸಲು ಸಾಧ್ಯವಿಲ್ಲ. ಫುಟ್‌ಬಾಲ್ ವಿಶ್ವಕಪ್‌ಗೆ ಬಂದರೆ ಇಂತಹ ತಂಡಗಳು ಅರ್ಹತಾ ಸುತ್ತಿನಲ್ಲೂ ಆಡುವುದು ಅನುಮಾನ. ಈ ವೈರುಧ್ಯವನ್ನೊಮ್ಮೆ ಗಮನಿಸಿ... 1999, 2003, 2007ರಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಸತತ 3 ವಿಶ್ವಕಪ್‌ಗಳನ್ನು ಗೆದ್ದಿತ್ತು. ಆಗದಕ್ಕೆ ಎಂತಹ ಹುಮ್ಮಸ್ಸಿತ್ತೆಂದರೆ ತನ್ನ ದೇಶದಲ್ಲಿ ನಾಲ್ಕು ಅಂತಾರಾಷ್ಟ್ರೀಯ ಗುಣಮಟ್ಟದ ತಂಡಗಳನ್ನು ಏಕಕಾಲಕ್ಕೆ ಆಡಿಸಬಲ್ಲ ಸಾಮರ್ಥ್ಯವಿದೆ ಎಂದು ಬೀಗುವಷ್ಟರ ಮಟ್ಟಿಗೆ. ಆಗಿನ ಆಸೀಸ್ ಕ್ರಿಕೆಟಿಗರು ಮೈದಾನದಲ್ಲಿ ಗೂಳಿಗಳಂತೆ ವರ್ತಿಸುತ್ತಿದ್ದರು.

ಭಾರತೀಯ ಕ್ರಿಕೆಟಿಗರನ್ನು ಕಂಡರೆ ಅದೊಂದು ರೀತಿಯ ಅಣಕವಾಡುವ ಛಾಯೆ ಅವರಲ್ಲಿ ಕಾಣುತ್ತಿತ್ತು. ಈಗ ಭಾರತೀಯ ಕ್ರಿಕೆಟ್‌ಗೆ ದಕ್ಕಿದ ಹಣಬಲ, ಗುಣಬಲ, ಅಭಿಮಾನ ಬಲದಿಂದ ಆಸೀಸಿಗರು ಬಹುತೇಕ ಸ್ಲೆಜಿಂಗ್ ಅನ್ನೇ ನಿಲ್ಲಿಸಿದ್ದಾರೆ ಎಂದು ಅನಿಸುತ್ತದೆ.

ಐಪಿಎಲ್‌ನಲ್ಲಿ ಭಾರತೀಯ ಆಟಗಾರರ ಜೊತೆಗೆ ಆಡಬೇಕಾದ ಅವರು, ಅಲ್ಲಿ ಅಣಕವಾಡಿದರೆ ಇಲ್ಲಿ ನಿಭಾಯಿಸುವುದು ಹೇಗೆ? ಇವತ್ತು ಭಾರತೀಯ ತಂಡದ ಶಕ್ತಿ ಹೇಗಿದೆಯೆಂದರೆ ಟೆಸ್ಟ್, ಏಕದಿನ, ಟಿ20ಗೆ ಸಂಪೂರ್ಣ ಪ್ರತ್ಯೇಕ ತಂಡಗಳನ್ನು ಮಾಡಲೇಬೇಕಾದ ಅನಿವಾರ್ಯತೆಯಿದೆ.

ಬೇಡಬೇಡವೆಂದು ಎಲ್ಲರೂ ಹೇಳುತ್ತಿದ್ದರೂ ಮೂರೂ ಮಾದರಿಗೆ ಬಹುತೇಕ ಭಿನ್ನ ಆಟಗಾರರೇ ಆಡುತ್ತಿದ್ದಾರೆ. ಈ ಹಿಂದೆ ಕೊಹ್ಲಿ, ರೋಹಿತ್, ಜಡೇಜ, ಬುಮ್ರಾ ಅಷ್ಟೇ ಎಲ್ಲ ಮಾದರಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದದ್ದು. ಮುಂದಿನ ದಿನಗಳಲ್ಲಿ ಅವೆಲ್ಲ ದಂತಕಥೆಗಳಾಗಬಹುದು!

ವಿಶ್ವ ಫುಟ್‌ಬಾಲ್ ಅನ್ನು ನಿಭಾಯಿಸುವ ಫಿಫಾವನ್ನು ಗಮನಿಸಿ. ಅದು ಜಗತ್ತಿನ ಶ್ರೀಮಂತ ಕ್ರೀಡಾಮಂಡಳಿ. ಅದರ ಅಂಕಿಅಂಶಗಳನ್ನೆಲ್ಲ ಇಲ್ಲಿ ನೀಡುವ ಅಗತ್ಯವಿಲ್ಲ, ಫಿಫಾದ ಒಟ್ಟು ಸದಸ್ಯ ರಾಷ್ಟ್ರಗಳು 211. ವಿಶ್ವಕಪ್‌ನಲ್ಲಿ 48 ತಂಡಗಳು ಆಡುತ್ತವೆ. ಈ ವಿಶ್ವಕಪ್‌ನ ಅರ್ಹತಾಸುತ್ತಿನಲ್ಲೂ ಭಾರತ ಗೆಲ್ಲುವುದು ಕಷ್ಟ.

ಅದೂ ಅಫ್ಘಾನಿಸ್ತಾನ, ಕತಾರ್, ಕುವೈತ್ ನಂತಹ ತಂಡಗಳೆದುರು ಗೆಲ್ಲಲು ಉಬ್ಬಸ ಪಟ್ಟುಕೊಳ್ಳುತ್ತದೆ. 2026 ಫುಟ್‌ಬಾಲ್ ವಿಶ್ವಕಪ್ ಇರಲಿ, 2027ರಲ್ಲಿ ನಡೆಯುವ ಎಎಫ್‌ಸಿ ಏಷ್ಯಾ ಕಪ್‌ಗೂ ಭಾರತಕ್ಕೆ ಅರ್ಹತೆ ಸಿಕ್ಕಿಲ್ಲ!

ಕ್ರಿಕೆಟ್‌ನಲ್ಲಿ ಸುನೀಲ್ ಗಾವಸ್ಕರ್, ಕಪಿಲ್ ದೇವ್, ಚಂದ್ರಶೇಖರ್, ಎರ‍್ರಪಳ್ಳಿ ಪ್ರಸನ್ನ, ಸಚಿನ್ ತೆಂಡುಲ್ಕರ್, ರಾಹುಲ್ ದ್ರಾವಿಡ್, ಸೌರವ್ ಗಂಗೂಲಿ, ಅನಿಲ್ ಕುಂಬ್ಳೆ, ವಿವಿಎಸ್ ಲಕ್ಷ್ಮಣ್, ವೀರೇಂದ್ರ ಸೆಹ್ವಾಗ್, ಯುವರಾಜ್ ಸಿಂಗ್, ಎಂ.ಎಸ್.ಧೋನಿ, ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಆರ್.ಅಶ್ವಿನ್, ಜಸ್‌ಪ್ರೀತ್ ಬುಮ್ರಾರಂತಹ ಸಾರ್ವಕಾಲಿಕ ಶ್ರೇಷ್ಠರನ್ನು ಭಾರತ ಸೃಷ್ಟಿಸಬಲ್ಲುದಾದರೇ ಫುಟ್‌ಬಾಲ್‌ನಲ್ಲಿ ಸಾಧ್ಯವಿಲ್ಲವೇ? ಈ ಮೇಲಿನ ಆಟಗಾರರೆಲ್ಲ ತಮ್ಮದೇ ಕಾರಣಕ್ಕೆ ಶ್ರೇಷ್ಠರು.



ಇವರನ್ನು ವಿಶ್ವದ ಯಾವುದೇ ಇತರೆ ಕ್ರೀಡೆಯ ದಂತಕಥೆಗಳಿಗೆ ಹೋಲಿಸಬಹುದು. ಸಚಿನ್ ತೆಂಡುಲ್ಕರ್‌ರನ್ನು ಕ್ರಿಕೆಟ್ ದೇವರು ಎಂದು ಕರೆದಿರುವುದರಲ್ಲಿ ನನಗೆ ಯಾವುದೇ ಉತ್ಪ್ರೇಕ್ಷೆಯೂ ಕಾಣಿಸುವುದಿಲ್ಲ. 24 ವರ್ಷಗಳ ಕಾಲ ಕ್ರಿಕೆಟ್ ಮೈದಾನದಲ್ಲಿ ಉತ್ಕೃಷ್ಟ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಕಡಿಮೆ ಸಾಧನೆಯಾ? ರಾಹುಲ್ ದ್ರಾವಿಡ್ ಮೈದಾನದಲ್ಲಿದ್ದಾಗ ಬಾರಿಸುತ್ತಿದ್ದ ಹೊಡೆತಗಳನ್ನು ಹೊಸ ತಲೆಮಾರು ವಿಡಿಯೋದಲ್ಲಿ ಪರಿಶೀಲಿಸಿದರೆ, ಅದರ ಕಲಾತ್ಮಕತೆಯು ಸಂಗೀತದಂತೆ ಕೇಳಿಸಿ ಮೈಜುಮ್ಮೆನ್ನಿಸಬಹುದು.

ಯಾವುದೇ ಬೌಲರ್ ಬಂದರೂ ಮುಲಾಜಿಲ್ಲದೇ ಸಿಕ್ಸರ್ ಗೆರೆ ದಾಟಿಸುತ್ತಿದ್ದ ಸೆಹ್ವಾಗ್, ವಿಶ್ವ ಕ್ರಿಕೆಟ್‌ನಲ್ಲೇ ಅತಿ ಬಲಿಷ್ಠ ಬೌಲಿಂಗ್ ಬಲದೊಂದಿಗೆ ದಾಳಿಗಿಳಿದಿದ್ದ ಆಸ್ಟ್ರೇಲಿಯಾದೆದುರು ಲಕ್ಷ್ಮಣ್ ದಾಖಲಿಸಿದ 281 ರನ್‌ಗಳನ್ನು ಕ್ರಿಕೆಟ್ ಪ್ರೇಮಿಗಳು ಎಂದಾದರೂ ಮರೆಯಲು ಸಾಧ್ಯವೇ? ಅನಿಲ್ ಕುಂಬ್ಳೆಯ 10 ವಿಕೆಟ್, ಸೌರವ್ ಗಂಗೂಲಿಯ ಎಡಗೈ ಬ್ಯಾಟಿಂಗ್, ಪ್ರತಿಭೆಗಳ ಬೆನ್ನಬಲವಾಗಿನಿಂತ ನಾಯಕತ್ವ, ಎಂ.ಎಸ್.ಧೋನಿಯ ಊಹಿಸಲೇ ಆಗದ ನಿರ್ಧಾರಗಳು, ಎಂತಹ ಬೌಲಿಂಗ್ ಬಲಕ್ಕೆ ಆದರೂ ಎದೆಕೊಟ್ಟು ನಿಲ್ಲುವ ಕೊಹ್ಲಿ, ರೋಹಿತ್ ಸಾಮರ್ಥ್ಯ ವಿಶ್ವದ ಇತರೆ ಯಾವ ಕ್ರೀಡಾ ತಾರೆಗಳಿಗೆ ಕಡಿಮೆಯಿದ್ದಾರೆ?

ಇಂತಹ ವಿಶ್ವ ದಿಗ್ಗಜರನ್ನು ಸೃಷ್ಟಿಸಲು ಬಿಸಿಸಿಐಗೆ ಸಾಧ್ಯವಾದರೆ -ಫುಟ್‌ಬಾಲ್‌ನಲ್ಲಿ ಏಕೆ ಸಾಧ್ಯವಿಲ್ಲ? ಇದನ್ನು ಸಾಧ್ಯ ಮಾಡಬಾರದೆಂದು ಕಾಣದ ಕೈಗಳು ನಿಯಂತ್ರಿಸುತ್ತಿರಬಹುದೆಂದೇ ಹಲವು ಬಾರಿ ನನಗೆ ಸಂಶಯ ಬರುತ್ತದೆ.

ಒಂದು ವೇಳೆ ಹಾಗೆ ಫುಟ್‌ಬಾಲ್ ಅನ್ನು ಬೆಳೆಯಲು ಬಿಟ್ಟಿದ್ದರೆ, ತೆಂಡುಲ್ಕರ್, ಗಂಗೂಲಿ, ಕೊಹ್ಲಿ, ರೋಹಿತ್ ಫುಟ್‌ಬಾಲ್ ಮೈದಾನದಲ್ಲಿರುತ್ತಿದ್ದರು. ಭಾರತ ಮತ್ತು ವಿಶ್ವದ ಮೂಲೆಮೂಲೆಗಳಲ್ಲಿ ಅವರು ಹೋದ ಜಾಗದಲ್ಲಿ ಜನರನ್ನು ನಿಯಂತ್ರಿಸುವುದು ಕಷ್ಟವಾಗುತ್ತಿತ್ತು.

ಭಾರತದಲ್ಲಿ ಅಭಿಮಾನಿಗಳು ಮುತ್ತಿಕೊಳ್ಳುವುದನ್ನು ತಡೆದುಕೊಳ್ಳಲಾಗದೇ ವಿರಾಟ್ ಕೊಹ್ಲಿ ಇಂಗ್ಲೆಂಡ್‌ನಲ್ಲಿ ಮನೆ ಮಾಡಿದ್ದಾರೆ. ಅಲ್ಲಿ ಅವರು ರಸ್ತೆಗಿಳಿದರೆ ನಿರಾಳವಾಗಿರಬಹುದಂತೆ. ಅದೇ ಭಾರತದಲ್ಲಾದರೆ ಕೊಹ್ಲಿ ಪತ್ನಿ ಅನುಷ್ಕಾ ಶರ್ಮಾ ಗರ್ಭಿಣಿಯಾದರೆ ಸಾಕು, ಅದನ್ನು ಸರಣಿಸರಣಿಯಾಗಿ ವರದಿ ಮಾಡಲು ಪತ್ರಕರ್ತರು ಬೆನ್ನುಬೆನ್ನಿಗೆ ಬೀಳುತ್ತಾರೆ.

ದಯವಿಟ್ಟು ಇವನ್ನೆಲ್ಲ ಸುದ್ದಿ ಮಾಡಬೇಡಿ ಎಂದು ಅವರು ಗೋಗರೆದು, ಕಡೆಗೆ ಸಿಟ್ಟಾಗುವ ಮಟ್ಟಕ್ಕೆ ಇಲ್ಲಿನ ಪರಿಸ್ಥಿತಿಯಿದೆ. ಬಹಳ ಕ್ರಿಕೆಟಿಗರು ತಾವು ಪತ್ರಿಕೆ ಓದುವುದಿಲ್ಲ, ಟಿವಿ ನೋಡುವುದಿಲ್ಲ ಎಂದೇ ಹೇಳಿದ್ದಾರೆ. ಕೆಲವೇ ಕೆಲವು ದೇಶಗಳಲ್ಲಿ ಜನಪ್ರಿಯವಿರುವ ಕ್ರಿಕೆಟ್‌ನಿಂದಲೇ ಈ ತಾರೆಗಳು ಇಂತಹದ್ದೊಂದು ಅಭಿಮಾನದ ಹೊಳೆಗೆ ಸಿಲುಕುವಂತಾದರೆ, ಫುಟ್‌ಬಾಲ್‌ನಲ್ಲಿ ಏನಾಗಬಹುದು? ಭಾರತದಲ್ಲಿ ಫುಟ್‌ಬಾಲ್ ಅನ್ನು ಬೆಳೆಸಲು ಎಐಎಫ್‌ಎಫ್ ಎಂದೂ ಗಂಭೀರವಾಗಿ ಶ್ರಮ ಹಾಕಿಲ್ಲ. ಅದರ ಬಗ್ಗೆ ಯಾರೆಷ್ಟೇ ಕೂಗಾಡಿದರೂ ಪ್ರಯೋಜನವಿಲ್ಲ.

1937ರಲ್ಲಿ ಶುರುವಾದ ಎಐಎಫ್‌ಎಫ್ ಸಂಸ್ಥೆಯಡಿ ಫುಟ್‌ಬಾಲ್‌ನಲ್ಲಿ ಆಡುತ್ತಿರುವ ಆಟಗಾರರಲ್ಲಿ ಬಹುತೇಕರು ಈಶಾನ್ಯ ಭಾರತ, ಕೇರಳದಿಂದ ಬಂದಿರುತ್ತಾರೆ. ಇತರೆ ಭಾಗಗಳ ಆಟಗಾರರ ಸಂಖ್ಯೆ ಬಹಳ ಕಡಿಮೆಯಿರುತ್ತದೆ. ಬಿಸಿಸಿಐನ ವ್ಯವಸ್ಥೆ ಹೇಗಿದೆ ಎಂದರೆ ಇಲ್ಲಿ ರಣಜಿ ನಡೆದರೆ ದೇಶದ 38 ತಂಡಗಳು ಆಡುತ್ತವೆ. ಜಮ್ಮುಕಾಶ್ಮೀರವೂ ಸೇರಿ ದೇಶದ ಎಲ್ಲ ತಂಡಗಳು ಇಲ್ಲಿ ಆಡುತ್ತವೆ.

ಭಾರತ ಕ್ರಿಕೆಟ್ ತಂಡವೆಂದರೆ ಈ ಎಲ್ಲ ಅಗಣಿತ ಪ್ರತಿಭೆಗಳ ಮಹಾಸಂಗಮ. ಒಂದೊಂದು ಸ್ಥಾನಕ್ಕೂ ಇಲ್ಲಿ ಹತ್ತಾರು ಆಯ್ಕೆಗಳಿವೆ. ಪ್ರತಿ ಪಂದ್ಯಕ್ಕೂ ಆಟಗಾರರನ್ನು ಆಯ್ಕೆ ಮಾಡುವಾಗ ವ್ಯವಸ್ಥಾಪಕರು ಹೆಣಗಾಡುತ್ತಾರೆ.

ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿರುವ ಇಶಾನ್ ಕಿಶನ್, ಶುಭಮನ್ ಗಿಲ್, ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿರುವ ಕರುಣ್ ನಾಯರ್‌ಗೂ ಇಲ್ಲಿ ಸ್ಥಾನದ ಭದ್ರತೆಯಿಲ್ಲ, ಫುಟ್‌ಬಾಲ್‌ನಲ್ಲಿ ಮೂಲೆಮೂಲೆಗಳಿಂದ ಪ್ರತಿಭೆಗಳನ್ನು ಹೆಕ್ಕುವ ಸಾಹಸಕ್ಕೆ ಎಐಎಫ್‌ಎಫ್ ಎಂದೂ ಕೈಹಾಕಿಲ್ಲ. ಆ ಬೇಸರ ಭಾರತದಲ್ಲಿನ ಪ್ರತಿ ಫುಟ್‌ಬಾಲಿಗನಿಗೂ ಇದೆ. ಅಲ್ಲಿ ಆಡುವುದರಿಂದ ಆರ್ಥಿಕವಾಗಿ ಅವರು ಸುಭದ್ರಗೊಳ್ಳುತ್ತಾರೆ ಎಂದಂತೂ ಹೇಳಲು ಸಾಧ್ಯವೇ ಇಲ್ಲ. ಭಾರತೀಯ ಫುಟ್‌ಬಾಲ್ ತಂಡವನ್ನು ಬಿಸಿಸಿಐಗೆ ಕೈಯಲ್ಲಿಡಲು ಸಾಧ್ಯವಿಲ್ಲವೇ?



- ನಿರೂಪ (ಕೆ.ಪೃಥ್ವಿಜಿತ್)



» 1956ರ ಫೆಬ್ರವರಿಯ ಒಂದು ಚಳಿಯ ಬೆಳಗ್ಗೆ, ಹ್ಯಾರಿ ಡಿಲೇಯರ್ ಎನ್ನುವ ವ್ಯಾಪಾರಿ ಪೆನ್ಸಿಲ್ವೇನಿಯಾದ ಕುದುರೆ ಹರಾಜಿಗೆ ತಡವಾಗಿ ತಲುಪಿದರು. ರಸ್ತೆಯಲ್ಲಿ ಕಾರಿನ ಟೈರ್ ಪಂಕ್ಚರ್ ಆಗಿದ್ದರಿಂದ ಅವರು ಬರುವಷ್ಟರಲ್ಲಿ ಹರಾಜು ಮುಗಿದು ಹೋಗಿತ್ತು. ಒಳ್ಳೆಯ ತಳಿಯ ಕುದುರೆಗಳೆಲ್ಲಾ ಅದಾಗಲೇ ಮಾರಾಟವಾಗಿ ಲಾರಿಗಳಲ್ಲಿ ಹೊರಟಿದ್ದವು.

# ಸ್ನೋಮ್ಯಾನ್: ಯಾರೂ ಬೇಡವೆಂದ ಕುದುರೆಯ ವಿಜಯಗಾಥೆ

ಒಂದೊಳ್ಳೆ ಮಾತು

1956ರ ಫೆಬ್ರವರಿಯ ಒಂದು ಚಳಿಯ ಬೆಳಗ್ಗೆ, ಹ್ಯಾರಿ ಡಿಲೇಯರ್ ಎನ್ನುವ ವ್ಯಾಪಾರಿ ಪೆನ್ಸಿಲ್ವೇನಿಯಾದ ಕುದುರೆ ಹರಾಜಿಗೆ ತಡವಾಗಿ ತಲುಪಿದರು. ರಸ್ತೆಯಲ್ಲಿ ಕಾರಿನ ಟೈರ್ ಪಂಕ್ಚರ್ ಆಗಿದ್ದರಿಂದ ಅವರು ಬರುವಷ್ಟರಲ್ಲಿ ಹರಾಜು ಮುಗಿದು ಹೋಗಿತ್ತು. ಒಳ್ಳೆಯ ತಳಿಯ ಕುದುರೆಗಳೆಲ್ಲಾ ಅದಾಗಲೇ ಮಾರಾಟವಾಗಿ ಲಾರಿಗಳಲ್ಲಿ ಹೊರಟಿದ್ದವು.

ಅಲ್ಲಿ ಉಳಿದಿದ್ದದ್ದು ತಿರಸ್ಕೃತಗೊಂಡಂಥವು ಮಾತ್ರ. ಕಸಾಯಿಖಾನೆಗೆ ಸಾಗಿಸಲು ಸಿದ್ಧವಾಗಿದ್ದ ಒಂದು ಲಾರಿಯಲ್ಲಿ ಕೆಲವು ದಣಿದ ಕುದುರೆಗಳಿದ್ದವು. ಹ್ಯಾರಿ ಅಲ್ಲಿಂದ ಹೊರಡಲು ಅನುವಾದಾಗ ಒಂದು ಬೂದು ಬಣ್ಣದ ಕುದುರೆ ಅವರ ಗಮನ ಸೆಳೆಯಿತು.

ನಿಶ್ಶಕ್ತವಾಗಿದ್ದ ಅದರ ಬೆನ್ನ ಮೇಲೆ ಕೆಲಸದ ಹೊರೆ ಹೊತ್ತು ಆದ ಗಾಯದ ಗುರುತುಗಳಿದ್ದವು. ಅದು ಪಂದ್ಯದ ಕುದುರೆಯಾಗಿರಲಿಲ್ಲ, ಕೃಷಿ ಕೆಲಸಕ್ಕೆ ಬಳಸಿ ಬಿಟ್ಟಿದ್ದ ಸಾಮಾನ್ಯ ಕುದುರೆಯಾಗಿತ್ತು. ಆದರೆ ಆ ಕುದುರೆಯ ಕಣ್ಣುಗಳಲ್ಲಿ ಒಂದು ವಿಶೇಷತೆ ಇತ್ತು.

ಅದು ಯಾವುದೇ ಭಯವಿಲ್ಲದೆ, ಅತ್ಯಂತ ಶಾಂತವಾಗಿ ಮತ್ತು ತಾಳ್ಮೆಯಿಂದ ಹ್ಯಾರಿಯವರನ್ನು ನೋಡುತ್ತಿತ್ತು. ಹ್ಯಾರಿಗೆ ಏನೋ ಅನ್ನಿಸಿ, ಆ ಕುದುರೆಯನ್ನು ಕೆಳಗಿಳಿಸಲು ಹೇಳಿದರು. ಎಂಬತ್ತು ಡಾಲರ್‌ಗಳನ್ನು ನೀಡಿ ಅವರು ಅದನ್ನು ಖರೀದಿಸಿದರು. ಅದು ಕೇವಲ ಒಂದು ವ್ಯವಹಾರವಾಗಿರಲಿಲ್ಲ, ಒಂದು ಜೀವವನ್ನು ಸಾವಿನಿಂದ ಪಾರು ಮಾಡಿದ ಕರುಣೆಯಾಗಿತ್ತು.

ಹ್ಯಾರಿ ಆ ಕುದುರೆಯನ್ನು ಮನೆಗೆ ತಂದಾಗ, ಅವರ ಮಗಳು ಅದರ ಬಣ್ಣವನ್ನು ನೋಡಿ ಸ್ನೋಮ್ಯಾನ್ ಎಂದು ಕರೆದಳು. ಆರಂಭದಲ್ಲಿ ಅದು ಸವಾರಿಯನ್ನು ಕಲಿಯುವ ಮಕ್ಕಳಿಗೆ ಶಾಂತವಾಗಿ ಸಹಕರಿಸುವ ಸಾಮಾನ್ಯ ಕುದುರೆಯಾಗಿತ್ತು. ನಂತರ ಹ್ಯಾರಿ ಅದನ್ನು ಪಕ್ಕದ ಮನೆಯವರಿಗೆ 160 ಡಾಲರ್‌ಗೆ ಮಾರಾಟ ಮಾಡಿದರು. ಆದರೆ ಇಲ್ಲಿಂದ ಕಥೆ ಹೊಸ ತಿರುವು ಪಡೆಯಿತು. ಕೆಲವು ದಿನಗಳ ನಂತರ, ಸ್ನೋಮ್ಯಾನ್ ಅಲ್ಲಿಂದ ತಪ್ಪಿಸಿಕೊಂಡು ಮತ್ತೆ ಹ್ಯಾರಿಯ ಮನೆಗೆ ಬಂದಿತು!

ಹ್ಯಾರಿ ಅದನ್ನು ವಾಪಸ್ ಕಳುಹಿಸಿದರೂ, ಅದು ಮತ್ತೆ ಮತ್ತೆ ಬೇಲಿ ಹಾರಿ ಹ್ಯಾರಿಯ ಬಳಿಯೇ ಬರುತ್ತಿತ್ತು. ಅಷ್ಟೊಂದು ಎತ್ತರದ ಬೇಲಿಗಳನ್ನು ಹಾರುವುದು ಸಾಮಾನ್ಯ ಕುದುರೆಗೆ ಅಸಾಧ್ಯವಾಗಿತ್ತು.

ಆಗಲೇ ಹ್ಯಾರಿಗೆ ಆ ಕುದುರೆಯಲ್ಲಿದ್ದ ಅಸಾಧಾರಣ ಜಿಗಿತದ ಸಾಮರ್ಥ್ಯ ಅರಿವಾದದ್ದು. ಆ ಕುದುರೆ ತಾನು ಎಲ್ಲಿರಬೇಕೆಂದು ತಾನೇ ನಿರ್ಧರಿಸಿತ್ತು. ಹ್ಯಾರಿ ಸ್ನೋಮ್ಯಾನ್ ಅನ್ನು ವಾಪಸ್ ಖರೀದಿಸಿ ತರಬೇತಿ ನೀಡಲು ಆರಂಭಿಸಿದರು. ಕೇವಲ ಎರಡು ವರ್ಷಗಳಲ್ಲಿ, ಯಾವ ಕುದುರೆಯನ್ನು ಕಸಾಯಿಖಾನೆಗೆ ಕಳುಹಿಸಲಾಗುತ್ತಿತ್ತೋ, ಅದೇ ಕುದುರೆ ನ್ಯೂಯಾರ್ಕ್‌ನ ಪ್ರತಿಷ್ಠಿತ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ದೊಡ್ಡ ದೊಡ್ಡ ತಳಿಯ ಕುದುರೆಗಳ ವಿರುದ್ಧ ಸ್ಪರ್ಧಿಸಿತು.

1958 ಮತ್ತು 1956ರಲ್ಲಿ ಸತತವಾಗಿ ಎರಡು ಬಾರಿ ಹಾರ್ಸ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಪತ್ರಿಕೆಗಳು ಅದನ್ನು ಸಿಂಡರೆ ಹಾರ್ಸ್ ಎಂದು ಕರೆದವು. ಟಿವಿ ಶೋಗಳು ಮತ್ತು ಮ್ಯಾಗಜೀನ್‌ಗಳಲ್ಲಿ ಮಿಂಚುವ ಮೂಲಕ ಸ್ನೋಮ್ಯಾನ್ ಅಮೆರಿಕದ ಜನರ ಪ್ರೀತಿಯ ಸಂಕೇತವಾಯಿತು.

1969ರಲ್ಲಿ ಸ್ನೋಮ್ಯಾನ್ ನಿವೃತ್ತಿಯಾಯಿತು. 1974ರಲ್ಲಿ ಅದು ಮರಣ ಹೊಂದಿದಾಗ ಹ್ಯಾರಿ ಅದರ ಪಕ್ಕದ ಇದ್ದರು. ನಂತರ ಅದನ್ನು ಶೋ ಜಂಪಿಂಗ್ ಹಾಲ್ ಆಫ್ ಫೇಮ್‌ಗೆ ಸೇರಿಸಲಾಯಿತು. ಈ ಕಥೆಯನ್ನು ಆಧರಿಸಿ ಹ್ಯಾರಿ ಅಂಡ್ ಸ್ನೋಮ್ಯಾನ್ ಎಂಬ ಹೆಸರಿನ ಜನಪ್ರಿಯ ಸಾಕ್ಷ್ಯಚಿತ್ರ 2015ರಲ್ಲಿ ಬಿಡುಗಡೆಯಾಗಿದೆ.

ಇದಲ್ಲದೆ, ಎಲಿಜಬೆತ್ ಲೆಟ್ಸ್ ಎಂಬುವವರು ದ ಎಟೀ ಡಾಲರ್ ಚಾಂಪಿಯನ್ ಎಂಬ ಹೆಸರಿನ ಪುಸ್ತಕವನ್ನೂ ಬರೆದಿದ್ದಾರೆ, ಇದು ನ್ಯೂಯಾರ್ಕ್ ಟೈಮ್ಸ್ ಬೆಸ್ಟ್ ಸೆಲ್ಲರ್ ಪುಸ್ತಕವಾಗಿ ದಾಖಲಾಗಿದೆ. ಸಾಧ್ಯವಿಲ್ಲದ್ದು ಯಾವುದೂ ಇಲ್ಲ, ಸಾಧಾರಣ ಎನಿಸಿಕೊಂಡಿದ್ದು ಕೂಡ ಅದ್ಭುತಗಳನ್ನು ಸೃಷ್ಟಿಸುತ್ತದೆ ಎಂಬುದಕ್ಕೆ ಜಗತ್ತಿನಾದ್ಯಂತ ಇಂಥ ಅನೇಕ ಉದಾಹರಣೆಗಳು ಸಿಗುತ್ತವೆ.

ಕೇವಲ ವಂಶಾವಳಿ ಮತ್ತು ಬಾಹ್ಯರೂಪವನ್ನು ನೋಡಿ ಸಾಮರ್ಥ್ಯವನ್ನು ನಿರ್ಧರಿಸುವವರು ಇರುವಾಗ, ಹ್ಯಾರಿ ಆ ಕುದುರೆಯ ಒಳಗಿದ್ದ ಹಠ ಮತ್ತು ಪ್ರಾಮಾಣಿಕತೆಯನ್ನು ಕಂಡರು. ಕೆಲವೊಮ್ಮೆ ಶ್ರೇಷ್ಠತೆಯು ಪರಿಸ್ಥಿತಿಗೆ ಮಂಕಾಗಿರುತ್ತದೆ. ಎಲ್ಲರೂ ಕೈಬಿಟ್ಟ ವಸ್ತು, ವ್ಯಕ್ತಿ ಅಥವಾ ಪ್ರಾಣಿಯಲ್ಲಿ ಏನಾದರೂ ವಿಶೇಷತೆಯನ್ನು ಕಾಣುವ ಕಣ್ಣುಗಳಿದ್ದರೆ, ಸಾಮಾನ್ಯವೂ ಅಸಾಮಾನ್ಯವಾಗಬಲ್ಲದು ಎಂಬುದಕ್ಕೆ ಈ ಸ್ನೋಮ್ಯಾನ್ ಕಥೆಯೇ ಸಾಕ್ಷಿ ಅಲ್ಲವೇ?

- ರೂಪಾ ಗುರುರಾಜ್

## ಅಮ್ಮ

ವಯಸ್ಸು ನಿಲ್ಲುವುದಿಲ್ಲ ನೋಡಿ. ಅದು ಓಡ್ತಾನೆ ಇರುತ್ತೆ. ಮೊದಲಾದರೆ ಮನೆಯಲ್ಲಿ ಒಂದಷ್ಟು ಮಾತುಗಳನ್ನ ಕೇಳ್ತಾ ಇದ್ರು, ಆದರೆ ಈಗೀಗ ಮಕ್ಕಳಿಗೆ ಅವರ ತಲೆಯಲ್ಲಿ ತಾವು ಓದಿದ್ದೇವೆ ಜಗತ್ತಿನ ಪರಿಜ್ಞಾನ ಇದೆ ಮುಂದೆ ಹೇಗೆ ವರ್ತಿಸಬೇಕು ಅನ್ನೋದು ತಿಳಿದಿದೆ ಅನ್ನುವ ಒಂದು ಪುಟ್ಟ ಆಲೋಚನೆ ಗಟ್ಟಿಯಾಗಿ ಕೂತುಬಿಟ್ಟಿದೆ. ಹಾಗಾಗಿ ಈಗ ಮಕ್ಕಳು ಮಾತು ಕೇಳುತ್ತಿಲ್ಲ. ಸರಿ ತಪ್ಪುಗಳನ್ನ ತಿದ್ದಿ ಹೇಳೋಕೆ ಶುರು ಮಾಡಿದರೆ ನಮ್ಮ ಮೇಲೆ ಸಿಟ್ಟುಗೊಳ್ಳುತ್ತಾರೆ ನಮಗೆ ಲೋಕದ ಜ್ಞಾನ ಇಲ್ಲ ಅಂತ ಹಂಗಿಸುತ್ತಾರೆ ಹಾಗಾಗಿ ಅಮ್ಮ ಮಾತಾಡೋದನ್ನ ಬಿಟ್ಟಿದ್ದಾಳೆ. ತಪ್ಪಾದರೂ ಸಹಿಸಿಕೊಂಡಿದ್ದಾಳೆ ಮಕ್ಕಳು ಸೋತಾಗ ಬೇಸರಿಸಿದ್ದಾಳೆ ಎಷ್ಟೆಂದರೂ ಆಕೆ ಅನುಭವವನ್ನು ಪಡೆದವಳು. ಮಕ್ಕಳಿಗೆ ಇನ್ನೂ ಅರ್ಥವಾಗಿಲ್ಲ ಅಮ್ಮ ಯಾಕೆ ಈಗ ಮೌನವಾಗಿದ್ದಾರೆ ಅಂತ ಮಕ್ಕಳು ಅಂದುಕೊಂಡಿದ್ದಾರೆ ಅಮ್ಮನಿಗೆ ಆಧ್ಯಾತ್ಮಿಕ ಯೋಚನೆ ಶುರುವಾಗಿದೆ ಅಂತ ನಿಜವಾಗಲೂ ಅಮ್ಮನಿಗೆ ಮಕ್ಕಳ ಬದುಕಿನ ಬಗ್ಗೆ ಚಿಂತೆಯಾಗಿದೆ ಅಷ್ಟೇ....



- ಧೀರಜ್ ಬೆಳ್ಳಾರೆ

# ಔಷಧ ಕೊರತೆ ನೀಗಿಸಿ



ರಾಜ್ಯ ಔಷಧ ಉಗ್ರಾಣದಲ್ಲಿ ಜೀವರಕ್ಷಕ ಔಷಧಗಳ ಕೊರತೆಯು ತೀವ್ರವಾಗಿದ್ದು, ಸರ್ಕಾರಿ ಆಸ್ಪತ್ರೆಗಳಿಗೆ ಬೇಡಿಕೆಗೆ ತಕ್ಕಷ್ಟು ಔಷಧಗಳು ಪೂರೈಕೆಯಾಗುತ್ತಿಲ್ಲ. ಇದರಿಂದ ಔಷಧಗಳು ಸಿಗದೆ ರೋಗಿಗಳು ಪರದಾಡುವಂತಾಗಿದೆ. ಈ ಸಮಸ್ಯೆ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿಲ್ಲ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಮಧ್ಯ ಕರ್ನಾಟಕ ಹಾಗೂ ಹಳೆಯ ಮೈಸೂರು ಭಾಗದ ಬಹುತೇಕ ಜಿಲ್ಲೆಗಳಲ್ಲಿ ಔಷಧಗಳ ಕೊರತೆ ಬಾಧಿಸುತ್ತಿದೆ. 800ಕ್ಕೂ ಹೆಚ್ಚು ಮಾದರಿಯ ಔಷಧಗಳ ಸಂಗ್ರಹ ಜಿಲ್ಲಾ ಔಷಧ ಉಗ್ರಾಣಗಳಲ್ಲಿ ಇರುವುದು ಅಗತ್ಯ. ಆದರೆ, ಕೆಲವು ಜಿಲ್ಲೆಗಳಲ್ಲಿ 120ರಿಂದ 180 ಮಾದರಿಯ ಔಷಧ ದಾಸ್ತಾನಷ್ಟೇ ಲಭ್ಯವಿದೆ. ಔಷಧಗಳ ಅಲಭ್ಯತೆಯಿಂದಾಗಿ ಬಡ ರೋಗಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಸಿಗಬೇಕಾದ ಜ್ವರದ ಮಾತ್ರೆ. ನೋವು ನಿವಾರಕಗಳು ಮತ್ತು ಆ್ಯಂಟಿಬಯೋಟಿಕ್‌ಗಳನ್ನು ರೋಗಿಗಳು ಹೊರಗಿನ ಮೆಡಿಕಲ್ ಶಾಪ್‌ಗಳಲ್ಲಿ ಹಣ ನೀಡಿ ಖರೀದಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಿರುವುದು. ನಿಜಕ್ಕೂ ದುರ್ದೈವಕರ, ಹೊಲಿಗೆ, ಬ್ಯಾಂಡೇಜ್ ಸಾಮಗ್ರಿಗಳ ಕೊರತೆಯನ್ನೂ ಆಸ್ಪತ್ರೆಗಳು ಎದುರಿಸುತ್ತಿವೆ.

ಸರ್ಕಾರಿ ಆಸ್ಪತ್ರೆಗಳನ್ನೇ ನೆಚ್ಚಿಕೊಂಡ ರೋಗಿಗಳ ಪರಿಸ್ಥಿತಿ ಏನಾಗಬೇಕು? ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ವೆಚ್ಚ ಭರಿಸುವ ಶಕ್ತಿ ಇಲ್ಲದ ಜನರು ಇದರಿಂದ ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತಾಗಿದೆ. ಐ ವಿ ದ್ರಾವಣ ಮತ್ತು ತುರ್ತು ಚಿಕಿತ್ಸಾ ಸಾಮಗ್ರಿಗಳ ಕೊರತೆಯಿಂದಾಗಿ ಅನೇಕ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗಳನ್ನು ತಾತ್ಕಾಲಿಕವಾಗಿ ಮುಂದೂಡಲಾಗಿರುವುದು. ಸಮಸ್ಯೆಯ ತೀವ್ರತೆಗೆ ಸಾಕ್ಷಿಯಾಗಿದೆ. ಹಾವು ಕಡಿತ ಮತ್ತು ನಾಯಿ ಕಡಿತಕ್ಕೆ ನೀಡುವ ಲಸಿಕೆಗಳ ಕೊರತೆಯೂ ಕೆಲವು ಜಿಲ್ಲೆಗಳಲ್ಲಿ ವರದಿಯಾಗಿದೆ. ಔಷಧಗಳ ದಾಸ್ತಾನು ನಿಟ್ಟಿನಲ್ಲಿ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಜನರು ಪರಿತಪಿಸುವಂತಾಗಿದೆ. ಔಷಧಗಳ ಖರೀದಿಗೆ ಅನುದಾನದ ಕೊರತೆ ಇದೆ ಎಂದು ಸಬೂಬು ನೀಡಲಾಗುತ್ತಿದ್ದು, ಅನುದಾನ ಬಿಡುಗಡೆಯಲ್ಲಿ ಯಾವುದೇ ವಿಳಂಬ ಸಲ್ಲ.

ಅಲ್ಲದೆ, ಸರ್ಕಾರಿ ಆಸ್ಪತ್ರೆಗಳು ಅಗತ್ಯ ಮೂಲಸೌಕರ್ಯಗಳಿಲ್ಲದೆ ಬಳಲುತ್ತಿದ್ದು, ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಗುಣಮಟ್ಟದ ಚಿಕಿತ್ಸೆಯ ಕೊರತೆ, ಚಿಕಿತ್ಸೆಯಲ್ಲಿ ನಿರ್ಲಕ್ಷ್ಯ, ಅಸಡ್ಡೆ, ಸೌಲಭ್ಯಗಳ ಕೊರತೆ, ಸಿಬ್ಬಂದಿ ಕೊರತೆ ಸೇರಿದಂತೆ ಹತ್ತು ಹಲವು ಸಮಸ್ಯೆಯಿಂದ ಬಳಲುತ್ತಿರುವ ಜಿಲ್ಲಾ ಮತ್ತು ತಾಲೂಕು ಸರ್ಕಾರಿ ಆಸ್ಪತ್ರೆಗಳು ಕ್ರಮೇಣ ಜನರ ನಂಬಿಕೆಯನ್ನೇ ಕಳೆದುಕೊಳ್ಳುತ್ತಿವೆ. ಹೀಗಿರುವಾಗ, ಈಗ ಔಷಧ ಕೊರತೆಯ ಸಮಸ್ಯೆಯೂ ತೀವ್ರ ಸ್ವರೂಪ ಪಡೆದುಕೊಂಡಿರುವುದು, ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಸ್ಪಷ್ಟ ನಿದರ್ಶನ ಆರೋಗ್ಯ ಸೇವೆಗಳನ್ನು ಉತ್ತಮಪಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ಆದರೆ, ಕನಿಷ್ಠ ಸವಲತ್ತು ಮತ್ತು ಅಗತ್ಯ ಔಷಧಗಳನ್ನು ಪೂರೈಸಲು ವಿಫಲವಾಗುತ್ತಿರುವುದು ಏಕೆ?

ಔಷಧಗಳ ಕೊರತೆ ನಿವಾರಣೆಗೆ ಸಂಬಂಧಿಸಿ 496 ಔಷಧಗಳ ಖರೀದಿ ಪ್ರಕ್ರಿಯೆ ನಡೆದಿದೆ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ಹೇಳಿದೆ. ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡುವವರು ಹೊರಗಿನಿಂದ ಔಷಧ ಖರೀದಿಸುವ ಅಗತ್ಯವಿಲ್ಲ ಎಂದೂ ಹೇಳಿದೆ. ಬಡವರು, ಮಧ್ಯಮವರ್ಗದವರು ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಬಿಸಿದ್ದಾರೆ. ಆದರೆ, ಮತ್ತೆ ಮತ್ತೆ ಔಷದಗಳ ಕೊರತೆ ಸೃಷ್ಟಿಯಾಗುತ್ತಿರುವ ಪರಿಣಾಮ ರೋಗಿಗಳು ಸಂಕಷ್ಟ ಎದುರಿಸುವಂತಾಗಿದೆ. ನಾಗರಿಕರಿಗೆ ಕಲ್ಪಿಸಬೇಕಾದ ಮೂಲಸೌಕರ್ಯಗಳ ಪೈಕಿ ಆರೋಗ್ಯವೂ ಒಂದು. ಈ ಬಗ್ಗೆ ನಿರ್ಲಕ್ಷ್ಯ ಸಲ್ಲ. ಔಷಧ ಖರೀದಿ ಮತ್ತು ಲಭ್ಯತೆಯ ಮಾಹಿತಿಯನ್ನು ಡಿಜಿಟಲ್ ವ್ಯವಸ್ಥೆಗೆ ಒಳಪಡಿಸಿ, ಪಾರದರ್ಶಕತೆ ಕಾಯ್ದುಕೊಳ್ಳುವುದು ಉತ್ತಮ.

ಸಂಪಾದಕರ ಸದ್ಯಶೋಧನೆ

# ಜಗತ್ತಿನ ಅತಿ ಕಡಿಮೆ ಅವಧಿ ಯುದ್ಧ

**1896ರ ಆಗಸ್ಟ್ 27ರಂದು ನಡೆದ ಆಂಗ್ಲೋ-ಜಂಜಿಬಾರ್ ಸಮರ ವಿಶ್ವ ಇತಿಹಾಸದ ಅತ್ಯಂತ ಕಡಿಮೆ ಅವಧಿಯ ಯುದ್ಧ ಎಂದು ದಾಖಲಾಗಿದೆ. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಆಫ್ರಿಕಾ ಖಂಡವು ಯುರೋಪಿಯನ್ ರಾಷ್ಟ್ರಗಳ ವಸಾಹತುಶಾಹಿ ಆಸಕ್ತಿಗೆ ಕೇಂದ್ರಬಿಂದುವಾಗಿತ್ತು.**

ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ ದಶಕಗಳ ಕಾಲ ನಡೆದ ಮಹಾಯುದ್ಧಗಳು, ರಕ್ತಸಿಕ್ತ ಹೋರಾಟಗಳು ನಮಗೆ ನೆನಪಾಗುತ್ತವೆ. ಇಸ್ರೇಲ್-ಗಾಜಾ ಮತ್ತು ರಷ್ಯಾ-ಉಕ್ರೇನ್ ನಡುವಿನ ಯುದ್ಧಗಳೇ ತಾಜಾ ನಿದರ್ಶನ. ಆದರೆ, ಕೇವಲ ಮೂವತ್ತೆಂಟು ನಿಮಿಷಗಳಲ್ಲಿ ಮುಕ್ತಾಯಗೊಂಡ ಒಂದು ಯುದ್ಧವಿದೆ ಎಂದರೆ ನಂಬಲು ಅಸಾಧ್ಯವೆನಿಸಬಹುದು.

ಹೌದು, 1896ರ ಆಗಸ್ಟ್ 27ರಂದು ನಡೆದ ಆಂಗ್ಲೋ-ಜಂಜಿಬಾರ್ ಸಮರ ವಿಶ್ವ ಇತಿಹಾಸದ ಅತ್ಯಂತ ಕಡಿಮೆ ಅವಧಿಯ ಯುದ್ಧ ಎಂದು ದಾಖಲಾಗಿದೆ. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಆಫ್ರಿಕಾ ಖಂಡವು ಯುರೋಪಿಯನ್ ರಾಷ್ಟ್ರಗಳ ವಸಾಹತುಶಾಹಿ ಆಸಕ್ತಿಗೆ ಕೇಂದ್ರಬಿಂದುವಾಗಿತ್ತು.

ಬ್ರಿಟನ್ ಮತ್ತು ಜರ್ಮನಿ ಪೂರ್ವ ಆಫ್ರಿಕಾದಲ್ಲಿ ತಮ್ಮ ಪ್ರಭಾವ ಬೀರಲು ಪೈಪೋಟಿ ನಡೆಸುತ್ತಿದ್ದವು. ಈ ಪೈಪೋಟಿಯ ನಡುವೆ ಹಿಂದೂ ಮಹಾಸಾಗರದ ಜಂಜಿಬಾರ್ (ಇಂದಿನ ತಾಂಜೇನಿಯಾದ ಭಾಗ) ದ್ವೀಪವು ಬ್ರಿಟನ್‌ನ ರಕ್ಷಣಾತ್ಮಕ ಆಳ್ವಿಕೆಗೆ ಒಳಪಟ್ಟಿತ್ತು.

ಬ್ರಿಟಿಷರ ಬೆಂಬಲವಿದ್ದ ಸುಲ್ತಾನ್ ಹಮದ್ ಬಿನ್ ತುವೈನಿ ಎಂಬುವವರು ಜಂಜಿಬಾರ್ ಅನ್ನು ಆಳುತ್ತಿದ್ದ. ಆದರೆ, ಆಗಸ್ಟ್ 25, 1896ರಂದು ಆತ ಹಠಾತ್ತನೆ ನಿಧನನಾದ. ಈ ಸಾವಿನ ನಂತರ ಅಧಿಕಾರದ ಗದ್ದುಗೆಯನ್ನು ಏರಿದ್ದು ಅವನ ಸೋದರಸಂಬಂಧಿ ಖಾಲಿದ್ ಬಿನ್ ಬರ್ಘಾಶ್.

ಬ್ರಿಟಿಷ್ ಸರಕಾರದೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ, ಹೊಸ ಸುಲ್ತಾನನ ನೇಮಕಾತಿಗೆ ಬ್ರಿಟಿಷ್ ಕಾನ್ಸಲ್‌ನ ಅನುಮತಿ ಬೇಕಿತ್ತು. ಆದರೆ ಖಾಲಿದ್ ಬರ್ಘಾಶ್ ಬ್ರಿಟಿಷರ ಅನುಮತಿ ಪಡೆಯದೆ ತಾನೇ ಸುಲ್ತಾನ್ ಎಂದು ಘೋಷಿಸಿಕೊಂಡ. ಇವನು ಬ್ರಿಟಿಷರಿಗಿಂತ ಜರ್ಮನ್ನರ ಕಡೆಗೆ ಒಲವು ಹೊಂದಿದ್ದ.

ಇದು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಯಿತು. ಬ್ರಿಟಿಷ್ ಅಧಿಕಾರಿ ಬಾಸಿಲ್ ಕೇವ್, ಸುಲ್ತಾನನಿಗೆ ಎಚ್ಚರಿಕೆ ನೀಡಿ, ಕೂಡಲೇ ಅರಮನೆಯಿಂದ ಹೊರಬರುವಂತೆ ಮತ್ತು ಶರಣಾಗುವಂತೆ ಸೂಚಿಸಿದ. ಆದರೆ ಖಾಲಿದ್ ಇದಕ್ಕೆ ಬಗ್ಗದೆ, ತನ್ನ ಅರಮನೆಯ ಸುತ್ತ ಸುಮಾರು ಮೂರು ಸಾವಿರ ಸೈನಿಕರನ್ನು ನಿಯೋಜಿಸಿ, ಹಳೆಯ ಯುದ್ಧನೌಕೆ ಗ್ಲ್ಯಾಸ್ಗೋ ಮೂಲಕ ರಕ್ಷಣೆಗೆ ನಿಂತ. ಆಗಸ್ಟ್ 26ರಂದು ಬ್ರಿಟಿಷರು ಅಂತಿಮ ಗಡುವು ನೀಡಿದರು - ಮರುದಿನ ಬೆಳಗ್ಗೆ ಒಂಬತ್ತು ಗಂಟೆಯೊಳಗೆ ಶರಣಾಗದಿದ್ದರೆ ದಾಳಿ ಮಾಡಲಾಗುವುದು.

ಮರುದಿನ ಬೆಳಗ್ಗೆ ಎಂಟು ಗಂಟೆಗೆ ಖಾಲಿದ್ ಒಂದು ಸಂದೇಶ ಕಳುಹಿಸಿದ - ನಾವು ನಮ್ಮ ಧ್ವಜವನ್ನು ಕೆಳಗಿಳಿಸುವುದಿಲ್ಲ ಮತ್ತು ನೀವು ನಮ್ಮ ಮೇಲೆ ಗುಂಡು ಹಾರಿಸುತ್ತೀರಿ ಎಂದು ನಾವು ನಂಬುವುದಿಲ್ಲ. ಅದಕ್ಕೆ ಪ್ರತಿಯಾಗಿ ಬ್ರಿಟಿಷರು, ನಾವು ಗುಂಡು ಹಾರಿಸಲು ಬಯಸುವುದಿಲ್ಲ, ಆದರೆ ನೀವು ಶರಣಾಗದಿದ್ದರೆ ನಾವು ದಾಳಿ ಮಾಡುವುದು ಖಚಿತ ಎಂದು ಉತ್ತರಿಸಿದರು.

ಬೆಳಗ್ಗೆ ಸರಿಯಾಗಿ ಒಂಬತ್ತು ಗಂಟೆಗೆ ಬ್ರಿಟಿಷ್ ಯುದ್ಧನೌಕೆಗಳಾದ ಹರ್ಕ್ಯುಲೆಸ್, ಫಿಲೋಮೆಲ್ ಮತ್ತು ರಷ್‌ಗಳಿಗೆ ದಾಳಿ ಮಾಡಲು ಆದೇಶ ನೀಡಲಾಯಿತು. ಮುಂದಿನ ಮೂರು ನಿಮಿಷಗಳಲ್ಲಿ ಫಿರಂಗಿಗಳು ಗುಡುಗಿದವು. ಮುಂದಿನ ಮೂವತ್ತೆಂಟು ನಿಮಿಷಗಳಲ್ಲಿ ಏನಾಯಿತು? ಬ್ರಿಟಿಷರ ಆಧುನಿಕ ಫಿರಂಗಿಗಳ ಮುಂದೆ ಸುಲ್ತಾನನ ಹಳೆಯ ಶಸ್ತ್ರಾಸ್ತ್ರಗಳು ಮಂಕಾದವು.

ಐದು ನಿಮಿಷಗಳಲ್ಲಿ ಸುಲ್ತಾನನ ಏಕೈಕ ಯುದ್ಧನೌಕೆ ಗ್ಲ್ಯಾಸ್ಗೋ ಮುಳುಗಡೆಯಾಯಿತು. ಅದಾಗಿ ಹತ್ತು ನಿಮಿಷಗಳಲ್ಲಿ ಅರಮನೆಯ ಮರದ ರಚನೆಗಳು ಬೆಂಕಿಗೆ ಆಹುತಿಯಾದವು. ಸುಲ್ತಾನ್ ಖಾಲಿದ್ ಪ್ರಾಣಭಯದಿಂದ ಅರಮನೆಯ ಹಿಂಬಾಗಿಲಿನಿಂದ ಓಡಿ ಹೋಗಿ ಜರ್ಮನ್ ರಾಯಭಾರ ಕಚೇರಿಯಲ್ಲಿ ಆಶ್ರಯ ಪಡೆದ.

ಮುಂದಿನ ಅರ್ಧ ಗಂಟೆಯಲ್ಲಿ ಅರಮನೆಯ ಮೇಲಿದ್ದ ಸುಲ್ತಾನನ ಧ್ವಜವನ್ನು ಕೆಳಗಿಳಿಸಲಾಯಿತು. ಗುಂಡಿನ ದಾಳಿ ನಿಂತಿತು. ಅಷ್ಟರಲ್ಲಿ ಕೇವಲ ಮೂವತ್ತೆಂಟು ನಿಮಿಷಗಳು ಕಳೆದಿತ್ತು. ಜಂಜಿಬಾರ್ ಸೈನ್ಯದ ಸುಮಾರು ಐನೂರು ಜನರು ಸಾವನ್ನಪ್ಪಿದರು ಅಥವಾ ಗಾಯಗೊಂಡರು.

ಬ್ರಿಟಿಷ್ ಕಡೆಯಿಂದ ಕೇವಲ ಒಬ್ಬ ಸೈನಿಕನಿಗೆ ಸಣ್ಣ ಗಾಯವಾಗಿತ್ತು. ಯುದ್ಧ ಮುಗಿದ ತಕ್ಷಣ ಬ್ರಿಟಿಷರು ತಮಗೆ ಬೇಕಾದ ಹಮದ್ ಬಿನ್ ಮುಹಮ್ಮದ್‌ನನ್ನು ಸುಲ್ತಾನನನ್ನಾಗಿ ನೇಮಿಸಿದರು. ಜಂಜಿಬಾರ್ ಮುಂದಿನ ಅರವತ್ತೇಳು ವರ್ಷಗಳ ಕಾಲ ಬ್ರಿಟಿಷರ ಸಂಪೂರ್ಣ ನಿಯಂತ್ರಣದಲ್ಲಿತ್ತು. ತಪ್ಪಿಸಿಕೊಂಡ ಖಾಲಿದ್ ನಂತರ ಬ್ರಿಟಿಷರಿಗೆ ಸಿಕ್ಕಿ ಬಿದ್ದು ಸೆರೆಯಾದ.

ಒಬ್ಬ ವ್ಯಕ್ತಿಯ ಹಠ ಮತ್ತು ತಪ್ಪು ನಿರ್ಧಾರ ಒಂದು ರಾಷ್ಟ್ರವನ್ನು ಹೇಗೆ ಯುದ್ಧಕ್ಕೆ ದೂಡಬಹುದು ಎಂಬುದಕ್ಕೆ ಇದು ದೊಡ್ಡ ಉದಾಹರಣೆ. ಇದು ಜಗತ್ತಿನ ಅತಿ ಕಡಿಮೆ ಅವಧಿಯ ಯುದ್ಧ ಎಂದು ದಾಖಲಾಗಿದೆ.

- ವಿಶ್ವೇಶ್ವರ ಭಟ್



## ಬ್ರಿಟಿಷರ ಬೆಂಬಲವಿದ್ದ ಸುಲ್ತಾನ್ ಹಮದ್

- ಸುಲ್ತಾನ್ ಹಮದ್ ಬಿನ್ ತುವೈನಿ ಎಂಬುವವರು ಜಂಜಿಬಾರ್ ಅನ್ನು ಆಳುತ್ತಿದ್ದ.
- ಆದರೆ, ಆಗಸ್ಟ್ 25, 1896ರಂದು ಆತ ಹಠಾತ್ತನೆ ನಿಧನನಾದ.
- ಈ ಸಾವಿನ ನಂತರ ಅಧಿಕಾರದ ಗದ್ದುಗೆಯನ್ನು ಏರಿದ್ದು ಅವನ ಸೋದರಸಂಬಂಧಿ ಖಾಲಿದ್ ಬಿನ್ ಬರ್ಘಾಶ್.
- ಬ್ರಿಟಿಷ್ ಸರಕಾರದೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ, ಹೊಸ ಸುಲ್ತಾನನ ನೇಮಕಾತಿಗೆ ಬ್ರಿಟಿಷ್ ಕಾನ್ಸಲ್‌ನ ಅನುಮತಿ ಬೇಕಿತ್ತು.

# ಮಹಿಳೆಯರು ಸ್ವಾವಲಂಬಿ ಜೀವನದತ್ತ ಸಾಗಬೇಕು

## ಗೃಹ ಅಲಂಕಾರಿಕ ವಸ್ತುಗಳ ತಯಾರಿಕೆ ಕುರಿತ 20 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿಗೆ ಶಾಸಕ ಮಂಜು ಚಾಲನೆ

• ಪ್ರಜೋದಯ ವರದಿ

**ಸಕಲೇಶಪುರ:** ಇಂದಿನ ಸಮಾಜದ ಪ್ರತಿಯೊಬ್ಬ ಮಹಿಳೆಯರೂ ಸ್ವಾವಲಂಬಿ ಜೀವನದತ್ತ ಮುನ್ನಡೆಯಬೇಕು ಎಂದು ಶಾಸಕ ಸಿಮೆಂಟ್ ಮಂಜುನಾಥ್ ಅವರು ಕಿವಿಮಾತು ಹೇಳಿದರು.



ಪಟ್ಟಣದ ಪುರಭವನದಲ್ಲಿ ಹರ್ಷಿತ ಸಂಸ್ಥೆ ಆಲೂರು, ಕೈಗಾರಿಕಾ ಮತ್ತು ಕೌಶಲ್ಯ ತರಬೇತಿ ಸಂಸ್ಥೆ ಹಾಗೂ ನಬಾರ್ಡ್ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ನಿರುಪಯುಕ್ತ ವಸ್ತುಗಳಿಂದ ಗೃಹ ಅಲಂಕಾರಿಕ ವಸ್ತುಗಳ ತಯಾರಿಕೆ ಕುರಿತ 20 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಭಾರತವನ್ನು ಬಡ ರಾಷ್ಟ್ರ ಎಂದು ಕರೆಯಲಾಗುತ್ತಿತ್ತು. ಆದರೆ ಇಂದಿನ ಭಾರತ ವೇಗವಾಗಿ ಅಭಿವೃದ್ಧಿಯತ್ತ ಸಾಗುತ್ತಿದ್ದು, ಇನ್ನೂ ಕೆಲವೇ ವರ್ಷಗಳಲ್ಲಿ ಮುಂದುವರಿದ ರಾಷ್ಟ್ರಗಳ ಸಾಲಿಗೆ ಸೇರುವ ವಿಶ್ವಾಸವಿದೆ. ದೇಶ ಮುಂದುವರಿಯಬೇಕಾದರೆ ಯುವಕರು ಹಾಗೂ ಮಹಿಳೆಯರು ಸ್ವಂತ ಉದ್ಯೋಗಗಳತ್ತ ಮುಖ ಮಾಡಬೇಕು. ಒಬ್ಬರು ಉದ್ಯಮ ಆರಂಭಿಸಿದರೆ ಮತ್ತೊಬ್ಬರಿಗೆ ಉದ್ಯೋಗ ಸಿಗುತ್ತದೆ. ಹತ್ತು ಮಂದಿಗೆ ಕೆಲಸ ನೀಡುವ ಮಟ್ಟಕ್ಕೆ ಮಹಿಳೆಯರು ಬೆಳೆಯಬೇಕು ಎಂದು ಅವರು ಸಲಹೆ ನೀಡಿದರು.

ಒಂದು ಕಾಲದಲ್ಲಿ ಮಹಿಳೆಯರು ಅಡುಗೆ ಮನೆಗೆ ಸೀಮಿತರಾಗಿದ್ದರೆ, ಇಂದಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆಯುತ್ತಿದ್ದಾರೆ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ, ತಮ್ಮ ಕ್ಷೇತ್ರದ ತಹಶೀಲ್ದಾರ್ ಹಾಗೂ ಜಿಲ್ಲಾ ಪಂಚಾಯತ್ ಸಿಇಒ ಸಹ ಮಹಿಳೆಯರೇ ಆಗಿದ್ದಾರೆ. ಕೇಂದ್ರ ಸರ್ಕಾರ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ 33 ಶೇಕಡಾ ಮೀಸಲಾತಿ ನೀಡುವ ಮೂಲಕ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿದೆ ಎಂದು ತಿಳಿಸಿದರು.

ನಿರುಪಯುಕ್ತ ವಸ್ತುಗಳಿಂದ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಬಹುದು. ಈ ನಿಟ್ಟಿನಲ್ಲಿ 20 ದಿನಗಳ ತರಬೇತಿಯನ್ನು ಮಹಿಳೆಯರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ನಬಾರ್ಡ್ ಪರವಾಗಿ ರೇಣುಕಾ ಶಿವಕುಮಾರ್ ಅವರು ಮಾತನಾಡಿ, ಸುಸ್ಥಿರ ಸಮಾಜ ನಿರ್ಮಾಣಕ್ಕೆ ಮಹಿಳೆಯರು ಸ್ವಾವಲಂಬಿಗಳಾಗುವುದು ಅತ್ಯವಶ್ಯಕ. 1999ರಿಂದ ಹರ್ಷಿತ ಸಂಸ್ಥೆ ಗ್ರಾಮೀಣ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಸಣ್ಣ ಉಳಿತಾಯ, ಸ್ವಸಹಾಯ ಸಂಘಗಳ ರಚನೆ, ಸಬ್ಸಿಡಿ ಸಾಲ ಯೋಜನೆಗಳು, ಹೈನುಗಾರಿಕೆ ಹಾಗೂ ವಿವಿಧ ಕೌಶಲ್ಯ ತರಬೇತಿಗಳ ಮೂಲಕ ಮಹಿಳೆಯರನ್ನು ಶಕ್ತಿಮಂತರನ್ನಾಗಿ ಮಾಡುತ್ತಿದೆ ಎಂದು ಹೇಳಿದರು.

ಹರ್ಷಿತ ಸಂಸ್ಥೆ ಅಧ್ಯಕ್ಷ ಶನಂಜಪ್ಪ ಶೆಟ್ಟಿ, ಲತಾ, ಕೆನರಾ ಬ್ಯಾಂಕ್ ವ್ಯವಸ್ಥಾಪಕಿ ಸರಸ್ವತಿ, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಗಂಗಾಧರ್ ಹಾಜರಿದ್ದರು.

# ಸಂಭ್ರಮದ ಶ್ರೀ ಶನೇಶ್ವರಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣ ಸಮೀಪದ ಮಲ್ಲಾಪುರದಲ್ಲಿ ನೆಲೆಸಿರುವ ಶ್ರೀ ಶನೇಶ್ವರಸ್ವಾಮಿ ದಿವ್ಯ ರಥೋತ್ಸವ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ವೇಲೂರಿನ ಬಿಷ್ಟಮ್ಮನವರ ಕೆರೆ ಕೋಡಿಯಲ್ಲಿ ನೆಲೆಸಿದ ಪುರಾಣ ಪ್ರಸಿದ್ಧ ಶ್ರೀ ಶನೇಶ್ವರ ದೇವರಿಗೆ ಮುಂಜಾನೆಯಿಂದ ಗಂಗಾಪೂಜೆ ಮಹಾಭಿಷೇಕ ಹೋಮ ಪಂಚಾಮೃತಾಭಿಷೇಕ ನೆರವೇರಿದ ನಂತರ ಮಧ್ಯಾಹ್ನ 1 ಗಂಟೆಗೆ ವೃಷಭ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಇದಕ್ಕೂ ಮುಂಚೆ ಮಲ್ಲಾಪುರ ಗ್ರಾಮಸ್ಥರು ಹೂವಿನ ಹಾರದೊಂದಿಗೆ ವಿವಿಧ ಕಲಾತಂಡದೊಂದಿಗೆ ಮೆರವಣಿಗೆ ಬಂದ ನಂತರ ವಿಶೇಷ ಪೂಜೆ ಸಲ್ಲಿಸಿ ಬಳಿಕ ಕಂದು ಕಡಿದ ನಂತರ ರಥೋತ್ಸವ ಪ್ರಾರಂಭವಾಯಿತು. ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ತನ್ನ ಸ್ವಸ್ಥಾನದಲ್ಲಿ ನಿಲ್ಲಿಸಲಾಯಿತು.



ಶ್ರೀ ಶನೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಡಿ.ಚಂದ್ರೇಗೌಡ ಮಾತನಾಡಿ, 1956 ನೇ ಇಸವಿಯಿಂದ ನಮ್ಮ ಪೂರ್ವಿಕರು ಹಿಂದಿನಿಂದಲೂ ನಮ್ಮ ತಾಲ್ಲೂಕಿನಲ್ಲಿ ಪ್ರಥಮವಾಗಿ ಇಲ್ಲಿ ರಥೋತ್ಸವ ಆದ ನಂತರ ಶ್ರೀ ಚನ್ನಕೇಶವಸ್ವಾಮಿ ರಥೋತ್ಸವ ಆಗುವ ವಾಡಿಕೆ ನಡೆದುಕೊಂಡು ಬರುತ್ತಿದೆ. ಈ ದೇವಾಲಯಕ್ಕೆ ಸುಮಾರು 50 ಗ್ರಾಮಕ್ಕೂ ಹೆಚ್ಚು ಗ್ರಾಮಸ್ಥರು ಹಾಗೂ ತಾಲ್ಲೂಕಿನ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ ಎಂದು ತಿಳಿಸಿದರು.

ಈ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಪಿಎಸ್ಐ ಎಸ್.ಜಿ.ಪಾಟೀಲ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಸಮಿತಿಯ ಕಾರ್ಯದರ್ಶಿ ಹೆಚ್.ಎಂ.ದಯಾನಂದ್, ಯು.ಟಿ.ಕೃಷ್ಣಮೂರ್ತಿ, ರಮೇಶ್, ಪ್ರಕಾಶ್, ಧರ್ಮೇಗೌಡ, ಎಂ.ಎ.ನಾಗರಾಜು, ಹೂವಮ್ಮ, ಬಸವರಾಜು, ಸಣ್ಣೇಗೌಡ, ಪುರಸಭೆ ಸದಸ್ಯ ಜಗದೀಶ್, ಉಮೇಶ್, ಕೋಳಿ ಶಿವು, ಈರೇಗೌಡ ಇತರರು ಹಾಜರಿದ್ದರು.

# ಫೆ.22ರಂದು ಭಾರತ- ದಕ್ಷಿಣ ಆಫ್ರಿಕಾ ಮುಖಾಮುಖಿ

**ಗುಜರಾತ್:** ಟಿ-20 ವಿಶ್ವಕಪ್‌ನಲ್ಲಿ ಏಳು ತಂಡಗಳು ಸೂಪರ್ 8 ಗೆ ಪ್ರವೇಶ ಪಡೆದಿವೆ. ಗ್ರೂಪ್ ಎ ನಲ್ಲಿ ಕೇವಲ ಒಂದು ಸ್ಥಾನ ಮಾತ್ರ ಉಳಿದಿದ್ದು, ಪಾಕಿಸ್ತಾನ ತಂಡವು ಮುನ್ನಡೆ ಸಾಧಿಸಿದ್ದು ಸೂಪರ್ 8 ಫೆ.21 ರಿಂದ ಪ್ರಾರಂಭವಾಗಲಿದೆ.

ಮಂಗಳವಾರ ಕ್ಯಾಂಡಿಯಲ್ಲಿ ಜಿಂಬಾಬ್ವೆ ಮತ್ತು ಐರ್ಲೆಂಡ್ ನಡುವಿನ 32ನೇ ಪಂದ್ಯ ಮಳೆಯಿಂದ ರದ್ದಾಗಿದೆ. ಒಂದು ಚೆಂಡನ್ನು ಬೌಲ್ ಮಾಡದೆಯೇ ಪಂದ್ಯವನ್ನು ರದ್ದುಗೊಳಿಸಲಾಯಿತು.

ಇದರಿಂದಾಗಿ ಎರಡೂ ತಂಡಗಳಿಗೆ ತಲಾ ಒಂದು ಅಂಕ ದೊರೆಯಿತು. ಈ ಮೂಲತ ಜಿಂಬಾಬ್ವೆ ತಂಡವು ಶ್ರೀಲಂಕಾ ಜೊತೆಗೆ ಗ್ರೂಪ್ ಬಿಯಿಂದ ಸೂಪರ್ 8ಗೆ ಅರ್ಹತೆ ಪಡೆದರೆ, ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದಿದೆ.

ಆಸ್ಟ್ರೇಲಿಯ ತಂಡವು 20 ವಿಶ್ವಕಪ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆಯಲು ವಿಫಲವಾಗಿರುವುದು ಎರಡನೇ ಬಾರಿ ಮತ್ತು ಮೊದಲ ಬಾರಿಗೆ 2009ರಲ್ಲಿಯೂ ತಂಡವು ಹೊರಬಿದ್ದಿತ್ತು. ಇದು ಮಿಚೆಲ್ ಮಾರ್ಷ್ ನೇತೃತ್ವದ ತಂಡದ ಫಾರ್ಮ್ ಕೊರತೆಯನ್ನು ತೋರಿಸುತ್ತದೆ. ಫೆ. 13 ರಂದು ಜಿಂಬಾಬ್ವೆ ವಿರುದ್ಧ ಮತ್ತು ಫೆಬ್ರುವರಿ 16 ರಂದು ಶ್ರೀಲಂಕಾ ವಿರುದ್ಧ ಆಸ್ಟ್ರೇಲಿಯಾ ಸೋಲು ಕಂಡಿತು. ಮತ್ತೊಂದೆಡೆ, ಜಿಂಬಾಬ್ವೆ ಪಂದ್ಯಾವಳಿಯ ಎರಡನೇ ಸುತ್ತಿಗೆ ಅರ್ಹತೆ ಪಡೆದಿರುವುದು ಇದು ಎರಡನೇ ಬಾರಿಯಾಗಿದೆ. 2022 ರಲ್ಲಿ ಅವರು ಸೂಪರ್ 12 ಗೆ ತಲುಪಿದ್ದರು.

ಇದೀಗ ಪಂದ್ಯಾವಳಿಯಲ್ಲಿ ಏಳು ತಂಡಗಳು ಸೂಪರ್ 8ಗೆ ಪ್ರವೇಶ ಪಡೆದಿವೆ. ಗ್ರೂಪ್ ಎ ನಲ್ಲಿ ಕೇವಲ ಒಂದು ಸ್ಥಾನ ಮಾತ್ರ ಉಳಿದಿದ್ದು, ಬಹುಶಃ ಪಾಕಿಸ್ತಾನ ತಂಡವು ಮುನ್ನಡೆ ಸಾಧಿಸುವ ಸಾಧ್ಯತೆಯಿದೆ. ಸೂಪರ್ 8 ಫೆ. 21 ರಿಂದ ಪ್ರಾರಂಭವಾಗಲಿದ್ದು, ಆಡುವ ತಂಡಗಳ ವೇಳಾಪಟ್ಟಿ ಪ್ರಕಟವಾಗಿದೆ.

ಟಿ20 ವಿಶ್ವಕಪ್ ಸೂಪರ್ 8, ಗ್ರೂಪ್ 1 ವೇಳಾಪಟ್ಟಿಗೆ ಬಂದರೆ, ಭಾರತ ಫೆಬ್ರುವರಿ 22 ರಂದು ಅಹಮದಾಬಾದ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ. ಫೆ.26 ರಂದು ಜಿಂಬಾಬ್ವೆ ವಿರುದ್ಧ ತಮ್ಮ ಎರಡನೇ ಪಂದ್ಯವನ್ನು ಆಡಲಿದೆ. ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ವಿರುದ್ಧ ತಮ್ಮ ಅಂತಿಮ ಪಂದ್ಯವನ್ನು ಆಡಲಿದ್ದಾರೆ.


# ಬೀದಿನಾಯಿಗಳ ಬಗ್ಗೆ ನಿಗಾ ವಹಿಸುವುದು ಮುಖ್ಯಸ್ಥರ ಜವಾಬ್ದಾರಿ

## ಸರ್ಕಾರಿ ಕಚೇರಿ, ಖಾಸಗಿ ಸಂಸ್ಥೆಗಳ ಆವರಣದಲ್ಲಿ ಬೀದಿನಾಯಿಗಳು ವಾಸಿಸದಂತೆ ನೋಡಿಕೊಳ್ಳಬೇಕು: ಡಿ.ಸಿ.

• ಪ್ರಜೋದಯ ವರದಿ

**ಹಾಸನ:** ನಗರ ಸ್ಥಳೀಯ ವ್ಯಾಪ್ತಿಯ ಸರ್ಕಾರಿ ಕಚೇರಿಗಳು, ಖಾಸಗಿ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳ ಮಾಹಿತಿಯನ್ನು ಕಡ್ಡಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು. ಕಚೇರಿ ಖಾಸಗಿ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳು ಇಲ್ಲದಂತೆ ನೋಡಿಕೊಳ್ಳುವುದು ಕಚೇರಿ ಸಂಸ್ಥೆಗಳ ಮುಖ್ಯಸ್ಥರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಹಾಸನ ನಗರದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದ ಅವರು, ಮಹಾನಗರ ಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಗರ ರಸ್ತೆಗಳ ಬದಿಯಲ್ಲಿ ಗಿಡಗಳನ್ನು ಹೆಚ್ಚಾಗಿ ಬೆಳಸಬೇಕು, ಹಸಿರು ನಗರವನ್ನಾಗಿ ಬೆಳಸುವ ಮೂಲಕ ಉತ್ತಮ ಪರಿಸರವನ್ನು ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.



ಹಸಿರು ಹಾಸನ ಎಂಬ ಶೀರ್ಷಿಕೆಯೊಂದಿಗೆ ಎಲ್ಲಾ ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಕಚೇರಿಗಳ ಆವರಣದಲ್ಲಿ, ಸರ್ಕಾರಿ ಭೂಮಿಯಲ್ಲಿ ಹೆಚ್ಚು ಗಿಡಗಳನ್ನು ಬೆಳಸಬೇಕು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಐದು ಸಾವಿರಕ್ಕೂ ಹೆಚ್ಚು, ನಗರಸಭೆ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ರಸ್ತೆಗಳು, ಫುಟ್ ಪಾತ್ ಗಳನ್ನು ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು, ರಾತ್ರಿ ಸಮಯದಲ್ಲಿ ರಸ್ತೆ ಬದಿಯಲ್ಲಿ ಕಸವನ್ನು ವಿಲೇವಾರಿ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳುವ ಮೂಲಕ ಸ್ವಚ್ಛ ನಗರಕ್ಕೆ ಆದ್ಯತೆ ನೀಡಬೇಕು ಎಂದು ಅವರು ಸೂಚಿಸಿದರು.

ಸಾರ್ವಜನಿಕರಿಗೆ ಕಸ ವಿಲೇವಾರಿ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು, ಕುಡಿಯುವ ನೀರಿಗೆ ಕಲ್ಮಷಿತ ನೀರು ಸೇರಿದಂತೆ ಎಚ್ಚರಿಕೆಯಿಂದ ನೋಡಿಕೊಳ್ಳ ಬೇಕು, ಹೋಟೆಲ್, ಬಾರ್, ರೆಸ್ಟೋರೆಂಟ್‌ಗಳ ಮುಂದೆ ಕಡ್ಡಾಯವಾಗಿ ಕಸದ ಬುಟ್ಟಿ ಇಟ್ಟಿಕೊಳ್ಳಬೇಕು ಸುತ್ತಮುತ್ತ ಎಲ್ಲೂ ಕಸ ಹಾಕದಂತೆ ಎಚ್ಚರ ವಹಿಸಬೇಕು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರುದ್ರಮುನಿ, ಮಹಾನಗರ ಪಾಲಿಕೆಯ ಆಯುಕ್ತರಾದ ಕೃಷ್ಣಮೂರ್ತಿ ಹಾಗೂ ಎಲ್ಲಾ ತಾಲ್ಲೂಕಿನ ಮುಖ್ಯಾಧಿಕಾರಿಗಳು ಹಾಜರಿದ್ದರು.

# ಮಹಾರಾಷ್ಟ್ರದಲ್ಲಿ ಮುಸ್ಲಿಂರಿಗೆ ನೀಡಿದ್ದ ಶೇ.5 ರಷ್ಟು ಮೀಸಲಾತಿ ರದ್ದು

**ಮುಂಬೈ:** ಮಹಾರಾಷ್ಟ್ರದ ದೇವೇಂದ್ರ ಫಡ್ನವೀಸ್ ಸರ್ಕಾರವು ಸರ್ಕಾರಿ ಉದ್ಯೋಗಗಳು ಮತ್ತು ಶಿಕ್ಷಣದಲ್ಲಿ ರಾಜ್ಯದಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಶೇ.5 ರಷ್ಟು ಮೀಸಲಾತಿಯನ್ನು ಅಧಿಕೃತವಾಗಿ ರದ್ದುಗೊಳಿಸಿದೆ.

ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ.5 ರಷ್ಟು ಮೀಸಲಾತಿಯನ್ನು 2014 ರಲ್ಲಿ ಕಾಂಗ್ರೆಸ್- ಎನ್‌ಸಿಪಿ ಸರ್ಕಾರ ಘೋಷಿಸಿತ್ತು. ಇದನ್ನು ಚುನಾವಣೆಗೆ ಮುಂಚಿತವಾಗಿ ಸುಗ್ರೀವಾಜ್ಞೆಯ ಮೂಲಕ ಪರಿಚಯಿಸಲಾಯಿತು. ಆದರೆ ಎಂದಿಗೂ ಕಾನೂನಾಗಲಿಲ್ಲ. ಏಕೆಂದರೆ ಬಿಜೆಪಿ- ಶಿವಸೇನೆ ಮೈತ್ರಿಕೂಟವು 2014 ರ ಮಹಾರಾಷ್ಟ್ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎನ್‌ಸಿಪಿಯನ್ನು ಸೋಲಿಸಿತು ಮತ್ತು ಸುಗ್ರೀವಾಜ್ಞೆಯು ರದ್ದಾಗಿತ್ತು.

# ರೈತರ ಆದಾಯ ವೃದ್ಧಿಗೆ ಕೇಂದ್ರದ ಯೋಜನೆ ಪರಿಣಾಮಕಾರಿ

## ವೈಜ್ಞಾನಿಕ ಬೇಸಾಯ ಪದ್ಧತಿಗಳ ಕುರಿತು ತರಬೇತಿ, ಪ್ರಾತ್ಯಕ್ಷಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ಕೃಷಿ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನಗಳ ಅಳವಡಿಕೆ, ಸಮರ್ಪಕ ತರಬೇತಿ ಹಾಗೂ ರೈತರ ಆದಾಯ ವೃದ್ಧಿಗೆ ಕೇಂದ್ರ ಸರ್ಕಾರದ ATMA (Agricultural Technology Management Agency) ಯೋಜನೆ ಪರಿಣಾಮಕಾರಿ ಪಾತ್ರ ವಹಿಸುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ನಿರ್ದೇಶಕರ ಕಚೇರಿ ಆವರಣದಲ್ಲಿ ಮಂಗಳವಾರ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಕೇಂದ್ರ ಸರ್ಕಾರ ಪುರಸ್ಕೃತ ಆತ್ಮ ಯೋಜನೆಯಡಿ ಆಯೋಜಿಸಿದ್ದ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯೋಜನೆಯು ರೈತರಿಗೆ ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳುವ ವಿಧಾನಗಳು, ಕೃಷಿ ಯಾಂತ್ರೀಕರಣ, ಸಾವಯವ ಬೇಸಾಯ ಹಾಗೂ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಮೂಲಕ ಸ್ವಾವಲಂಬಿ ಕೃಷಿಗೆ ಉತ್ತೇಜನ ನೀಡುತ್ತಿದೆ. ಇದರಡಿ ನೂತನ ಕೃಷಿ ತಂತ್ರಜ್ಞಾನಗಳು ಹಾಗೂ ವೈಜ್ಞಾನಿಕ ಬೇಸಾಯ ಪದ್ಧತಿಗಳ ಕುರಿತು ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಗುತ್ತಿದ್ದು, ರೈತರಿಗೆ ಅಗತ್ಯ ತಾಂತ್ರಿಕ ಜ್ಞಾನ ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ರೈತರ ಗುಂಪುಗಳನ್ನು ಬಲಪಡಿಸುವುದು, ಮಾರುಕಟ್ಟೆ ಸಂಪರ್ಕವನ್ನು ಸುಧಾರಿಸುವುದು ಹಾಗೂ ಜಿಲ್ಲಾ ಮಟ್ಟದಲ್ಲಿ ಕೃಷಿ ಸಂಶೋಧನೆ ಮತ್ತು ರೈತರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುವುದೇ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಮಣ್ಣಿನ ಆರೋಗ್ಯ ಸುಧಾರಣೆ ಹಾಗೂ ಸಾವಯವ ಗೊಬ್ಬರಗಳ ಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಸುಸ್ಥಿರ ಹಾಗೂ ಸಾವಯವ ಕೃಷಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ರೈತರು ವೈಜ್ಞಾನಿಕ ಭೂ ತಾರಸಿ ಪದ್ಧತಿ ಅನುಸರಿಸುವುದರ ಜೊತೆಗೆ ಟೀ, ರಬ್ಬರ್ ಹಾಗೂ ಜೇನು ಕೃಷಿಯಂತಹ ಪರ್ಯಾಯ ಬೆಳೆಗಳತ್ತ ಹೆಚ್ಚಿನ ಒಲವು ತೋರಬೇಕು. ಇದರಿಂದ ಅವರ ಆರ್ಥಿಕ ಸ್ಥಿತಿ ಸುಧಾರಣೆಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ 25 ಮಂದಿ ಫಲಾನುಭವಿಗಳಿಗೆ ಜಾಯಿಕಾಯಿ ಸಸಿಗಳನ್ನು ವಿತರಿಸಲಾಯಿತು. ಜಾಯಿಕಾಯಿ ಬೆಳೆಯುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದ ಬಗ್ಗೆ ರೈತರಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ರೈತರು ಉಪಸ್ಥಿತರಿದ್ದರು.

# ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಿಯಿಂದ 66/11 ಕೆ.ವಿ ಸಾಲಗಾಮೆ ಮತ್ತು ಹಗರೆ ವಿ.ವಿ ಕೇಂದ್ರಗಳಲ್ಲಿ ಮಾರ್ಗಗಳ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಫೆ.20 ರಂದು ಬೆಳಿಗ್ಗೆ 10 ರಿಂದ ಸಂಜೆ 6ಗಂಟೆವರೆಗೆ ಸಾಲಗಾಮೆ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಇಸ್ರೋ, ರಾಯಪುರ, ಕೊಂಡಜ್ಜಿ, ಯಲಗುಂದ, ನಿಟ್ಟೂರು, ಗುಳ್ಳೇನಹಳ್ಳಿ, ಮುತ್ತತಿ, ಭೋಗರಹಳ್ಳಿ, ಕೆಲವತ್ತಿ ಮತ್ತು ಹಗರೆ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹುಲುಗುಂಡಿ, ದೇವಿಹಳ್ಳಿ, ಆಂದಲೆ, ಹಗರೆ, ಸವಾಸಿಹಳ್ಳಿ, ಹೀರುಗುಪ್ಪೆ, ಕ್ಯಾತನಹಳ್ಳಿ, ಮಾದಿಹಳ್ಳಿ, ಮೂಳೇನಹಳ್ಳಿ, ಬೊಮ್ಮೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ. 24 ರಂದು ಪ್ರಗತಿ ಪರಿಶೀಲನಾ ಸಭೆ

**ಹಾಸನ:** ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಹಾಗೂ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯನ್ನು ಫೆ. 24 ರಂದು ಬೆಳಿಗ್ಗೆ 10:30 ಕ್ಕೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಂಭಾಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

# ಕಾರ್ಮಿಕರ ವೃದ್ಧಾಪ್ಯಕ್ಕೆ ಪಿ.ಎಂ.ಎಸ್.ಎಂ.ವೈ. ರಕ್ಷಣೆ

## ಅಸಂಘಟಿತ ಕಾರ್ಮಿಕರಿಗಾಗಿ ಪಿಂಚಣಿ ಸೌಲಭ್ಯ

• ಪ್ರಜೋದಯ ವರದಿ

**ಬೇಲೂರು:** ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು, ಬಿಸಿ ಊಟದ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಕಟ್ಟಡ ನಿರ್ಮಾಣ ಕಾರ್ಮಿಕರು, ಕೃಷಿ ಕಾರ್ಮಿಕರು, ಆಟೋ ಟ್ಯಾಕ್ಸಿ ಚಾಲಕರು ಸೇರಿದಂತೆ ಇತರೆ ಸುಮಾರು 91 ವರ್ಗದ ಅಸಂಘಟಿತ ಕಾರ್ಮಿಕರು ವೃದ್ಧಾಪ್ಯದಲ್ಲಿ 3000 ರೂಪಾಯಿಗಳ ಖಚಿತ ಮಾಸಿಕ ಪಿಂಚಣಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯಲ್ಲಿ ನೋಂದಾವಣಿಯಾಗುವಂತೆ ತಾಲೂಕು ಹಿರಿಯ ಕಾರ್ಮಿಕ ನಿರೀಕ್ಷಕ ವಿಜಯ ಕುಮಾರ್ ಎಸ್.ತಿಳಿಸಿದರು.



ಪಟ್ಟಣದಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಪಿಂಚಣಿ ವಿಶೇಷ ನೋಂದಣಿ ಅಭಿಯಾನ ಹಾಗೂ ತಾಲೂಕಿನ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರುಗಳಿಗಾಗಿ ಆಯೋಜಿಸಿದ್ದ ಶ್ರಮಯೋಗಿ ಮಾನ್ ಧನ್ ಯೋಜನೆಯ ಮಾಹಿತಿ ಕಾರ್ಯಗಾರವನ್ನು ಕುರಿತು ಮಾಹಿತಿ ನೀಡಿದ ಅವರು, ಅಸಂಘಟಿತ ವಲಯದ ಕಾರ್ಮಿಕರ ವೃದ್ಧಾಪ್ಯ ಜೀವನದ ಅವಧಿಯಲ್ಲಿ ರಕ್ಷಣೆ ಪಡೆಯಲು ಈ ಯೋಜನೆ ಸಹಕಾರಿಯಾಗಲಿದೆ, ಈ ಯೋಜನೆಗೆ ಸೇರಲು 18 ವರ್ಷದಿಂದ 40 ವರ್ಷಗಳ ವಯೋಮಿತಿ ನಿಗದಿಯಾಗಿದ್ದು ನೊಂದಾಯಿತ ಫಲಾನುಭವಿಗಳು 60 ವರ್ಷ ಪೂರೈಸಿದ ಬಳಿಕ ನೇರ ನಗದು ವರ್ಗಾವಣೆ ಕುಟುಂಬ ಪಿಂಚಣಿಯ ಪ್ರಯೋಜನದೊಂದಿಗೆ 3000 ಖಚಿತ ಮಾಸಿಕ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ ಎಂದರು.

ಈ ಸೌಲಭ್ಯ ಪಡೆಯ ಬಯಸುವ ಸದಸ್ಯರು ವಯಸ್ಸಿಗೆ ಅನುಗುಣವಾಗಿ ರೂಪಾಯಿ 55 ರಿಂದ 200 ರವರೆಗೆ ಮಾಸಿಕ ವಂತಿಕೆ ಪಾವತಿ ಮಾಡಬೇಕು ಹಾಗೂ ಸದಸ್ಯರ ವಂತಿಕೆಯ ಸಮಾನವಾಗಿ ಸರ್ಕಾರವು ಭರಿಸುತ್ತದೆ. ಆದ್ದರಿಂದ ನಿಮ್ಮ ಸಂಘದ ಸದಸ್ಯರುಗಳಿಗೆ ಈ ಯೋಜನೆ ಕುರಿತು ಮಾಹಿತಿ ನೀಡಿ ಯೋಜನೆಯ ಲಾಭ ಪಡೆದುಕೊಳ್ಳುವಂತೆ ತಿಳಿಸಿ ಎಂದು ಹೇಳಿದರು.

# ಯಶಸ್ವಿನಿ ಆರೋಗ್ಯ ವಿಮಾ ಕುರಿತು ತರಬೇತಿ ಕಾರ್ಯಾಗಾರ

## ವಿಮಾ ಯೋಜನೆಯಿಂದ 5 ಲಕ್ಷ ರೂ.ವರೆಗೆ ರೈತರಿಗೆ ಉಪಯುಕ್ತ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಮತ್ತು ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಹಾಸನ ಉಪವಿಭಾಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಕುರಿತು ತರಬೇತಿ ಕಾರ್ಯಾಗಾರ ಮತ್ತು ಒಂದು ದಿನದ ವಿಶೇಷ ತರಬೇತಿ ಶಿಬಿರ ನಡೆಯಿತು.



ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಹಕಾರ ಸಂಘಗಳಲ್ಲಿ ಸಿಇಓ ಮತ್ತು ಕಾರ್ಯದರ್ಶಿಗಳ ಪಾತ್ರ ಮುಖ್ಯವಾಗಿದ್ದು ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯು 5 ಲಕ್ಷ ರೂ.ವರೆಗೆ ರೈತರಿಗೆ ತುಂಬ ಉಪಯುಕ್ತವಾಗಿದ್ದು ಈ ಯೋಜನೆಯನ್ನು ರೈತರ ಅನುಕೂಲಕ್ಕಾಗಿ ಅನುಷ್ಠಾನಕ್ಕೆ ತಂದಿರುವುದು ನಮ್ಮೆಲರ ಬಾಗ್ಯ ಎಂದು ಹೇಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್. ಪ್ರಕಾಶ್ ಅವರು ಮಾತನಾಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಪಟ್ಟಣ ಮತ್ತು ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳು ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಆ ಮುಖೇನ ಗ್ರಾಮೀಣಾ ಮತ್ತು ಪಟ್ಟಣವಾಸಿಗಳು ಸಹಕಾರ ಸಂಘಗಳ ಸದಸ್ಯರುಗಳಿಗೆ ನೆರವಾಗಬೇಕೆಂದರು.

ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ವಿ.ಎನ್.ರಾಜಣ್ಣ, ಪುಟ್ಟಸ್ವಾಮಿಗೌಡ, ಸೋಮಣ್ಣ, ಹೆಚ್‌ಡಿಸಿಸಿ ಬ್ಯಾಂಕಿನ ಎಲ್ಲಾ ಕ್ಷೇತ್ರಾಧಿಕಾರಿಗಳು ಮತ್ತು ಹಾಸನ ಹಾಲು ಒಕ್ಕೂಟದ ವಿಸ್ತರಣಾಧಿಕಾರಿ, ಟೆಕ್ನಿಕಲ್ ಹೆಡ್, ಸುಮುಖ ಟೇಕ್ನಾಲಜಿಸ್, ಬೆಂಗಳೂರು, ಅನುಪ್ ಬಲರಾಮು, ಸಹಕಾರ ಸಂಘಗಳ ಉಪನಿಬಂಧಕ ಕೆ.ಕೆ.ಕಿರಣ್‌ಕುಮಾರ್, ನಿರ್ದೇಶಕ ಜಿ.ಹೆಚ್.ಸಿದ್ದೇಶ್, ಯೂನಿಯನ್ನಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಭಾರತಿ, ಒಕ್ಕೂಟದ ನಿರ್ದೇಶಕರಾದ ಪುಟ್ಟಸ್ವಾಮಿಗೌಡ, ವಾಣಿ ಇದ್ದರು

## ನವಿಲೆ ಗ್ರಾಮದ ಶ್ರೀ ನಾಗೇಶ್ವರ ಸ್ವಾಮಿ ಹಾಗೂ ಶ್ರೀ ಕೆಂಪಮ್ಮ ದೇವಿಯವರಿಗೆ ಎರಡು ದಿನಗಳ ಕಾಲ ವಿಶೇಷ ಪೂಜೆ

# ಫೆ.21 ರಂದು 1 ಕೋ. ರೂ. ವೆಚ್ಚದ ನೂತನ ರಥ ಲೋಕಾರ್ಪಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಬಾಗೂರು ಹೋಬಳಿಯ ನವಿಲೆ ಗ್ರಾಮದ ಶ್ರೀ ನಾಗೇಶ್ವರ ಸ್ವಾಮಿ ಹಾಗೂ ಶ್ರೀ ಕೆಂಪಮ್ಮ ದೇವಿಯವರ ನೂತನ ರಥ ಲೋಕಾರ್ಪಣೆ ಅಂಗವಾಗಿ ಫೆ.21 ಮತ್ತು 22 ರಂದು ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಅವರು ಪರಮೇಶ್ ತಿಳಿಸಿದರು.

ಈ ಬಗ್ಗೆ ಶ್ರೀ ನವಿಲೆ ನಾಗೇಶ್ವರ ದೇವಾಲಯದ ಸನ್ನಿಧಿಯಲ್ಲಿ ಕಾರ್ಯಕ್ರಮಗಳ ಸಿದ್ಧತೆ ಪರಿಶೀಲನೆ ನಡೆಸಿ ಮಾಹಿತಿ ನೀಡಿದ ಅವರು, ಭಕ್ತರು ಗ್ರಾಮಸ್ಥರು ಹಾಗೂ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ಹಾಗೂ ವಿವಿಧ ಪಕ್ಷಗಳ ನಾಯಕರ ಸಹಕಾರದಿಂದ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣವಾಗಿದ್ದು, ರಥದ ಲೋಕಾರ್ಪಣೆ ಅಂಗವಾಗಿ ಫೆಬ್ರವರಿ 21 ಶನಿವಾರ ದಂದು ಶ್ರೀ ನಾಗೇಶ್ವರ ಸ್ವಾಮಿ, ಶ್ರೀ ರಂಗನಾಥ ಸ್ವಾಮಿ, ಶ್ರೀ ಕೆಂಪಮ್ಮ ದೇವಿ ದೇವರುಗಳ ಆಗಮನದೊಂದಿಗೆ ಸಂಜೆ ಐದರಿಂದ ಆರು ಗಂಟೆಗೆ ಸಲ್ಲುವ ಶುಭ ಗೋಧೂಳಿ ಲಗ್ನದಲ್ಲಿ ಗಣಪತಿ, ಗಂಗೆ ಪೂಜೆ ಯೊಂದಿಗೆ ಹೋಮ ಇತ್ಯಾದಿಗಳು ನಡೆಯಲಿದೆ. ಫೆ.22ರ ಭಾನುವಾರದಂದು ದೇವಾಲಯದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಅಭಿಷೇಕ ಸೇರಿದಂತೆ ನೂತನ ರಥದ ಲೋಕಾರ್ಪಣೆ ಪ್ರಯುಕ್ತ ವಿವಿಧ ಪೂಜೆಗಳು ನಡೆಯಲಿವೆ ಎಂದರು.

ನೂತನ ರಥದ ಲೋಕಾರ್ಪಣೆ ಅಂಗವಾಗಿ ನಡೆಯುವ ವೇದಿಕೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸುಕ್ಷೇತ್ರ ಕೆರಗೋಡಿ ರಂಗಾಪುರ ಮಠದ ಶ್ರೀ ಗುರು ಪರದೇಶಿ ಕೇಂದ್ರ ಮಹಾ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಮಠದ ಕೆಂಗೇರಿ ಶ್ರೀ ನಿಶ್ಚಲಾನಂದ ಮಹಾ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದ ಶ್ರೇಯಸ್ ಪಟೇಲ್ ಅವರು ನೆರವೇರಿಸುವರು.



ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಮಾಜಿ ಶಾಸಕ ಸಿ ಎಸ್ ಪುಟ್ಟೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಭಾರತ ಸರ್ಕಾರ ಮಧ್ಯಮ ಕೈಗಾರಿಕೆಗಳ ಸಚಿವಾಲಯದ ಅಪಾರ ಕಾರ್ಯದರ್ಶಿ ಬಿ.ಎಂ. ವರಪ್ರಸಾದ್ ರೆಡ್ಡಿ, ಎಸಿ ಜಗದೀಶ್ ಗಂಗಣ್ಣ, ತಹಸಿಲ್ದಾರ್ ಶಂಕರಪ್ಪ, ತಾಪಂ ಇ ಓ ಹರೀಶ್ ಹರೀಶ್, ನುಗ್ಗೇಹಳ್ಳಿ ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಜ್ರಕುಮಾರ್, ಜಿ ಪಂ ಮಾಜಿ ಉಪಾಧ್ಯಕ್ಷ ಎಇ ಚಂದ್ರಶೇಖರ್, ಬಿಜೆಪಿ ಮುಖಂಡ ಚಿದಾನಂದ, ಮಾಜಿ ಜಿಪಂ ಸದಸ್ಯೆ ಕುಸುಮ ಬಾಲಕೃಷ್ಣ, ನೂತನ ರಥದ ಶಿಲ್ಪಿ ಶಿವಕುಮಾರ್ ಆಚಾರ್ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮ ಯಶಸ್ಸಿಗೆ ಸಹಕಾರ ನೀಡುವಂತೆ ಕೋರಿದರು.

ಶ್ರೀ ನಾಗೇಶ್ವರಸ್ವಾಮಿ ನೂತನ ರಥ ನಿರ್ಮಾಣ ಸಮಿತಿ ಅಧ್ಯಕ್ಷ ಎನ್. ಸದಾಶಿವಯ್ಯ ಮಾತನಾಡಿ, ನವಿಲೆ ನಾಗೇಶ್ವರಸ್ವಾಮಿ ರಾಜ್ಯದ ಪವಿತ್ರ ಪುಣ್ಯಕ್ಷೇತ್ರವಾಗಿದ್ದು, ರಾಜ್ಯದ ನಾನಾ ಭಾಗಗಳಿಂದ ದಿನನಿತ್ಯ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆಯುತ್ತಾರೆ. ಎರಡು ವರ್ಷಗಳ ಹಿಂದೆ ಹಳೆಯ ರಥ ಸಂಪೂರ್ಣವಾಗಿ ಮುರಿದು ಬಿದ್ದ ಹಿನ್ನೆಲೆಯಲ್ಲಿ ಹೊಸ ರಥದ ನಿರ್ಮಾಣಕ್ಕೆ ಭಕ್ತರು ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಮುಂದಾಗಲಾಯಿತು. ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಗೊಂಡಿದ್ದು ರಥದ ಲೋಕಾರ್ಪಣೆ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಭಕ್ತರು ಹೆಚ್ಚಿನ ಆಗಮಿಸುವಂತೆ ಮನವಿ ಮಾಡಿದರು.

ಶ್ರೀ ನಾಗೇಶ್ವರ ಸ್ವಾಮಿ ನೂತನ ರಥ ಸಮಿತಿ ಖಜಾಂಚಿ ಹಾಗೂ ಕೃಷಿ ಪತ್ತಿನ ಅಧ್ಯಕ್ಷ ಕುಮಾರಸ್ವಾಮಿ, ನವಿಲೆ ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗಪ್ಪ ಈ ಸಂದರ್ಭದಲ್ಲಿ ರಥ ನಿರ್ಮಾಣ ಸಮಿತಿ ಕಾರ್ಯದರ್ಶಿ ಎನ್.ಜಯದೇವಪ್ಪ, ಕಾರ್ಯದರ್ಶಿ ಕಾಂತರಾಜ್ ಎನ್, ಅರ್ಚಕರಾದ ಸಿದ್ದೇಶ್ ಶಾಸ್ತ್ರಿ, ಶಂಕರ್ ಪ್ರಸಾದ್ ಶಾಸ್ತ್ರಿ, ಅಭಿಷೇಕ್, ಸಂತೋಷ್, ಶಾಮಿಯಾನ ಶಿವಕುಮಾರ್, ಎನ್.ಟಿ. ನಿತ್ಯಾನಂದ ಇನ್ನಿತರರಿದ್ದರು.

# ಹನಿಟ್ರ್ಯಾಪ್ ಗ್ಯಾಂಗ್‌ನ ನಾಲ್ವರ ಬಂಧನ

» ಮೊದಲನೇ ಪುಟದಿಂದ

ಕಣ್ಣೀರಿಟ್ಟುಕೊಂಡೇ ವಿರೋಧ ವ್ಯಕ್ತಪಡಿಸಿದ್ದಾಳೆ. ನೀನು ಮನೆಗೆ ಬಂದಿದ್ದವನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದೀಯಾ ಎಂದು ವೈದ್ಯಕೀಯ ಪರೀಕ್ಷೆಯಲ್ಲಿ ಗೊತ್ತಾಗಿದೆ. ಅವನ ವಿರುದ್ಧ ಅತ್ಯಾಚಾರದ ಪ್ರಕರಣ ದಾಖಲು ಮಾಡಬೇಕು, ಇಲ್ಲವಾದಲ್ಲಿ ಈ ವಿಷಯವನ್ನು ನಿನ್ನ ಗಂಡನಿಗೆ ತಿಳಿಸುತ್ತೇವೆಂದು ಬೆದರಿಕೆ ಹಾಕಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

**ದೂರು ನೀಡಲು ಬೆದರಿಕೆ**

ಪರಿಚಯಸ್ಥ ವ್ಯಕ್ತಿಯ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿ, ಆತನಿಂದ ಹಣ ವಸೂಲಿ ಮಾಡುವುದು ಗ್ಯಾಂಗ್ ಉದ್ದೇಶವಾಗಿತ್ತು ಎಂದು ಪೊಲೀಸರು ಶಂಕಿಸಿದ್ದಾರೆ. ಫೆ.15 ರಂದು ಮಹಿಳೆಯನ್ನು ಬಲವಂತವಾಗಿ ಪೊಲೀಸ್ ಠಾಣೆಗೆ ಕರೆದೊಯ್ದು ದೂರು ನೀಡಲು ಯತ್ನಿಸಲಾಗಿದೆ. ಆದರೆ, ಠಾಣೆಯಲ್ಲಿ ಮಹಿಳೆ ಕಣ್ಣೀರಿಟ್ಟು ಹಿಂದೇಟು ಹಾಕಿದ ಹಿನ್ನಲೆ ಅನುಮಾನಗೊಂಡ ಹೊಳೆನರಸೀ ಪುರ ನಗರ ಠಾಣೆ ಪೊಲೀಸರು ಆಕೆ ಯನ್ನು ಸಾಂತ್ವಾನ ಕೇಂದ್ರಕ್ಕೆ ಕಳುಹಿಸಿ ವಿಚಾರಣೆ ನಡೆಸಿದರು. ಸಾಂತ್ವಾನ ಕೇಂದ್ರ ದಲ್ಲಿ ನೀಡಿದ ಹೇಳಿಕೆಯಲ್ಲಿ ಮಹಿಳೆ ಹನಿಟ್ರ್ಯಾಪ್ ಗ್ಯಾಂಗ್‌ನ ಕಾರ್ಯ ವಿಧಾನವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾಳೆ.

ಈ ಹಿನ್ನಲೆ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್ ಎಸ್) ಸೆಕ್ಷನ್‌ಗಳು 64, 61(2), 308(2), 74 ಹಾಗು 3/5ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಲಕ್ಷ್ಮೀ ಹೊಳೆನರಸೀಪುರ ಪಟ್ಟಣದ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ವಕೀಲೆಯಾಗಿ ಸಹ ಸೇವೆ ಸಲ್ಲಿಸುತ್ತಿದ್ದಾಳೆ. ಈ ಹಿಂದೆಯೂ ಆಕೆಯ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದವು ಎಂದು ತಿಳಿದು ಬಂದಿದೆ.

ನಾಗಲಕ್ಷ್ಮೀ ಮತ್ತು ತಂಡ ಬಡ ಮಹಿಳೆಯರನ್ನು ಗುರಿಯಾಗಿಸಿಕೊಂಡು ಇದೇ ರೀತಿಯ ದಂಧೆ ನಡೆಸುತ್ತಿತ್ತು ಎನ್ನುವ ಮಾಹಿತಿ ಇದೆ. ಸದ್ಯ ಹೊಳೆನರಸೀಪುರ ಪೊಲೀಸರು ಪ್ರಕರಣದ ತನಿಖೆಯನ್ನು ಮುಂದುವರೆಸಿದ್ದು, ಇನ್ನೂ ಹೆಚ್ಚಿನ ಮಹಿಳೆಯರು ದೂರು ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

## ಇಂದು ಪರಿಚಯ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಹೇಮಾವತಿ ನಗರದ ಶ್ರೀರಂಗ ಶಿಕ್ಷಣ ಮಹಾವಿದ್ಯಾಲಯದಲ್ಲಿ ಗುರುವಾರ ಸಂಜೆ 5 ಗಂಟೆಗೆ ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕಸಾಪ ಜಿಲ್ಲಾಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ, ಪ್ರೊ. ಎಂ.ಶಂಕರ, ಶ್ರೀರಂಗ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಹೆಚ್.ಎಸ್.ಅನಿಲ್ ಕುಮಾರ್, ಪ್ರಾಂಶುಪಾಲ ಡಿ.ಎಸ್.ನವೀನ್ ಕುಮಾರ್ ಅವರು ಭಾಗವಹಿಸಲಿದ್ದಾರೆ.

## ಪುರದಮ್ಮ ದೇವಸ್ಥಾನ ಹುಂಡಿ ಹಣ ಅನ್ಯ ಉದ್ದೇಶಕ್ಕೆ ಬಳಸದಿರಿ

» ಮೊದಲನೇ ಪುಟದಿಂದ

ದಿರುವ ಸಂದರ್ಭದಲ್ಲಿ ಮೀಸಿಂಗ್ ಸಮಿತಿಯ ಮುಂದೆ ಇಟ್ಟು ಪರಿಶೀಲಿಸಿ ತುರ್ತಾಗಿ ದುರಸ್ತಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿರುವ ನೂತನ ಗ್ರಾಮಗಳಿಗೆ ಇ-ಸ್ವತ್ತು ನೀಡುವ ಸಲುವಾಗಿ, ವಾಣಿಜ್ಯ ಮಳಿಗೆಗಳಿಗೆ ಹರಾಜು ಪ್ರಕ್ರಿಯೆ ಸಂಬಂಧಿಸಿದಂತೆ ಹಾಗು ಇತರೆ ವಿಷಯಗಳ ಕುರಿತು ಶಾಸಕರು ಸಭೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರುದ್ರಮುನಿ, ಮಹಾನಗರ ಪಾಲಿಕೆ ಆಯುಕ್ತರಾದ ಕೃಷ್ಣಮೂರ್ತಿ, ತಹಶೀಲ್ದಾರ್ ಗೀತಾ, ಮುಜರಾಯಿ ಇಲಾಖೆಯ ತಹಶೀಲ್ದಾರ್ ಲತಾ ಮತಿತ್ತರರು ಉಪಸ್ಥಿತರಿದ್ದರು.

# ಸುಮ್ಮನಿರದಿದ್ದರೆ ಬಿಜೆಪಿ ಕಚೇರಿ ಎದುರು ಕಸ ಹಾಕಿಸುವೆ: ಡಿ.ಕೆ.ಶಿ.

• ಪ್ರಜೋದಯ ವರದಿ



**ಬೆಂಗಳೂರು:** ನಿಗದಿತ ಪ್ರದೇಶದಲ್ಲಿ ನಗರದ ತ್ಯಾಜ್ಯ ಸುರಿಯಲು ಅಡ್ಡಿಪಡಿಸಿದರೆ ಬಿಜೆಪಿ ಶಾಸಕರ ನಿವಾಸ ಹಾಗು ಬಿಜೆಪಿ ಕಚೇರಿ ಎದುರು ವಿಲೇವಾರಿ ಮಾಡಬೇಕಾಗುತ್ತದೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಶಾಸಕರು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ. ಗೌರವದಿಂದ ಕಸದ ಲಾರಿಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಎಸ್ಮಾ ಮೂಲಕ ಕ್ರಮ ಕೈಗೊಳ್ಳಲಾಗುವುದು. ವಿರೋಧ ವ್ಯಕ್ತಪಡಿಸುವವರ ಮನೆ ಮುಂದೆ ಕಸ ಹಾಕಿಸುತ್ತೇನೆಂದರು.

ಬೆಂಗಳೂರು ನಗರದ ಘನ ತ್ಯಾಜ್ಯವನ್ನು ವಿಲೇವಾರಿ ಮಾಡಲು ಅಡ್ಡಿ ಪಡಿಸಲಾಗುತ್ತಿದೆ. ಅಲ್ಲಿ ಕಸ ಹಾಕಲು ಅವಕಾಶ ಕೊಡದೆ ಇದ್ದರೆ ನಾವು ಎಲ್ಲಿ ಹೋಗಬೇಕು. ಹೀಗಾದರೆ ಆರ್. ಅಶೋಕ್ ಮನೆ ಮುಂದೆ ಕಸ ಹಾಕಿಸಬೇಕಾಗುತ್ತದೆಂದು ಆಕ್ರೋಶ ವ್ಯಕ್ತಪಡಿಸಿದರು.

ಕಸದ ಲಾರಿ ಡಿಕ್ಕಿ ಹೊಡೆದು ಅಪಘಾತವಾಗಿದೆ. ಈ ವಿಚಾರವಾಗಿ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುತ್ತದೆ. ಆದರೆ ಅದನ್ನೇ ಮುಂದಿಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಿದರೆ ಹೇಗೆ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಅರವಿಂದ ಲಿಂಬಾವಳಿ ಪ್ರತಿಭಟನೆ ಮಾಡಿದ್ದಾರೆ. ಇವತ್ತು ದೊಡ್ಡಬಳ್ಳಾಪುರ ಕ್ಷೇತ್ರದ ಶಾಸಕ ಧೀರಜ್ ಮುನಿರಾಜು ಪ್ರತಿಭಟನೆ ನಡೆಸಿದ್ದಾರೆ. ಅವರೆಲ್ಲ ತಮ್ಮ ಕ್ಷೇತ್ರಕ್ಕೆ ಅನುದಾನ ಬೇಕೆಂದು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆಂದು ಆರೋಪ ಮಾಡಿದರು.

### ಗುತ್ತಿಗೆದಾರರ ಸಂಘದ ವಿರುದ್ಧ ಗರಂ

**ಗುತ್ತಿಗೆದಾರರು ಸಂಘದವರು ಸರ್ಕಾರದ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಬಾರದು. ಮೊದಲು ಕಾಮಗಾರಿ ನಿಲ್ಲಿಸಲಿ ನೋಡೋಣ. ಬಿಜೆಪಿ ಕಾಲದಲ್ಲಿ ಏಕೆ ಕಾಮಗಾರಿ ತೆಗೆದು ಕೊಂಡರು. ಬಿಜೆಪಿ ಕಾಲದಲ್ಲಿ ದುಡ್ಡಿಲ್ಲ ಕೆಲಸ ತೆಗೆದುಕೊಳ್ಳಬೇಡಿ ಎಂದು ಆಗಲೇ ಹೇಳಿದ್ದೇವು. ಹಾಗಾಗಿದ್ದರೂ ಟೆಂಡರ್ ಹಾಕಿ ಕೆಲಸ ಪಡೆದುಕೊಂಡರು. ಇಲಾಖೆಯಲ್ಲಿ 10 ಸಾವಿರ ರೂ. ಅನುದಾನ ಇದ್ದರೆ 30 ರಿಂದ 40 ಸಾವಿರ ರೂ. ಟೆಂಡರ್ ತೆಗೆದುಕೊಂಡಿದ್ದಾರೆ. ನಮ್ಮ ಇಲಾಖೆ ಯಲ್ಲಿ ಕೂಡ ಎಷ್ಟು ಅನುದಾನ ಇದೆಯೋ ಅಷ್ಟೇ ಕೆಲಸ ತಗೋಬೇಕಲ್ವಾ ಎಂದು ತರಾಟೆಗೆ ತೆಗೆದುಕೊಂಡರು.**

**ಅವರಿಗೆ ದುಡ್ಡು ಬೇಕು, ಇಲ್ಲ ಅಂತಲ್ಲ. ಕೆಲಸ ನಿಲ್ಲಿಸುವವರು ನಿಲ್ಲಿಸಲಿ, ಏನು ಬೇಕಾದರೂ ಮಾಡಿಕೊಳ್ಳಲಿ. ನಮಗೂ ಮಾನವೀಯತೆ ಇದೆ. ಬಜೆಟ್‌ನಲ್ಲಿ ಎಷ್ಟು ಅನುದಾನ ಇದೆಯೋ ಅಷ್ಟು ಬಿಲ್ ಬಿಡುಗಡೆ ಮಾಡುತ್ತೇವೆ. ಆದರೆ ಬ್ಲ್ಯಾಕ್ ಮೇಲ್ ಮಾಡುವವರೆಲ್ಲ ಮಾಡಿಕೊಳ್ಳಲಿಯೆಂದು ತಿರುಗೇಟು ನೀಡಿದರು.**

# ಪತ್ರಕರ್ತರ ಸಂಘದಲ್ಲಿ ಮಧ್ಯಾಹ್ನದ ಊಟಕ್ಕೆ ಚಾಲನೆ

» ಮೊದಲನೇ ಪುಟದಿಂದ

ಜೆ.ಆರ್.ಕೆಂಚೇಗೌಡ ಹಾಗೂ ತಂಡವರು ವಿಭಿನ್ನ ಕಾರ್ಯಕ್ರಮಗಳನ್ನು ಹಂತ-ಹಂತವಾಗಿ ಅನುಷ್ಠಾನ ಮಾಡುತ್ತಿದ್ದು, ಎಲ್ಲರೂ ಸಹಕಾರ ನೀಡಬೇಕೆಂದರು.

**ಉತ್ತಮ ಸುದ್ದಿ ಗುರುತಿಸುವ ಕಾರ್ಯ**

ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನ ಕುಮಾರ್ ಅವರು ಮಾತನಾಡಿ, ಮುದ್ರಣ ಹಾಗು ವಿದ್ಯುನ್ಮಾನ ಮಾಧ್ಯಮಗಳ ಉತ್ತಮ ವಾದ ಸುದ್ದಿ ಗುರುತು ಮಾಡುವುದು, ಅವರಿಗೆ ಪ್ರೋತ್ಸಾಹ ನೀಡುವುದು ನೋಟೆಡ್ ನ್ಯೂಸ್ ಫಲಕದ ಉದ್ದೇಶ. ವಾರಕ್ಕೆ ಒಂದು ದಿನ ಅಂದರೆ ಸೋಮವಾರ, ಹಾಸನ ಜಿಲ್ಲೆಯಿಂದ ಪ್ರಕಟವಾಗುವ ಎಲ್ಲಾ ಮಾಧ್ಯಮಗಳ ಸುದ್ದಿಗಳಲ್ಲಿ ಉತ್ತಮವಾದುದನ್ನು ಗುರುತಿಸಿ, ಅದನ್ನು ಆಯ್ಕೆ ಮಾಡಿ ಫಲಕದಲ್ಲಿ ಹಾಕುವ ಉದ್ದೇಶ ಹೊಂದಲಾಗಿದೆ. ಅದಕ್ಕೆ ಎಲ್ಲರೂ ಸಹಕರಿಸಬೇಕು, ನಮ್ಮ ಪತ್ರಿಕೆಯ ಅಥವಾ ಚಾಲೆನ್‌ನ ಸುದ್ದಿ ಹಾಕಿಲ್ಲ ಎನ್ನುವ ಬದಲು ಇನ್ನೊಬ್ಬರದ್ದೂ ಬರಬೇಕಿತ್ತು ಅನ್ನೋ ಭಾವನೆ ಎಲ್ಲರನ್ನೂ ಮೂಡಬೇಕು. ಒಂದು ರಚನಾತ್ಮಕ ಕೆಲಸ ಮಾಡಬೇಕೆನ್ನುವುದು ನಮ್ಮ ಹಂಬಲ. ಸ್ವತಂತ್ರವಾಗಿ ಮಾಡಲು ಬಿಡಿ ಎಂದು ಮನವಿ ಮಾಡಿದರು. ರಾಜ್ಯಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್, ಉಪಾಧ್ಯಕ್ಷ ಜೆ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್, ಖಜಾಂಚಿ ಪ್ರಕಾಶ್ ಬೆಳವಾಡಿ, ಕಾರ್ಯದರ್ಶಿ ಖುಶ್ವಂತ್, ಮಾಜಿ ಅಧ್ಯಕ್ಷರಾದ ಬಾಳ್ಳುಗೋಪಾಲ್, ರವಿನಾಕಲಗೂಡು, ಲೀಲಾವತಿ, ಬಿ.ಆರ್. ಉದಯಕುಮಾರ್, ಚೌಡುವಳ್ಳಿಜಗದೀಶ್, ಕಾರ್ಯದರ್ಶಿ ಕೆ.ಎಂ.ಹರೀಶ್ ಇದ್ದರು.



## ಉಂಗರಗೆರೆ ಮಹಿಳಾ ಸಂಘಕ್ಕೆ ಸುವರ್ಣಮ್ಮ ಅಧ್ಯಕ್ಷೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಹೋಬಳಿ ಉಂಗರಗೆರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಸುವರ್ಣಮ್ಮ ಅವಿರೋಧವಾಗಿ ಆಯ್ಕೆಯಾದರು. ಮುಂದಿನ ಐದು ವರ್ಷದ ಅವಧಿಗೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸುವರ್ಣಮ್ಮ ಹೊರತುಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಆಯ್ಕೆ ಘೋಷಿಸಲಾಯಿತು.

ಸುವರ್ಣಮ್ಮ ಅವರು ಮಾತನಾಡಿ, ಹೈನುಗಾರಿಕೆಯನ್ನು ಅಳವಡಿಸಿಕೊಂಡಿರುವ ಅದೆಷ್ಟೋ ಮಹಿಳೆಯರು ತಮ್ಮ ಬದುಕನ್ನು ಸದ್ರಢವಾಗಿ ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆಂದರು. ಕೃಷಿಯ ಜೊತೆಗೆ ಉಪಕಸುಬಾಗಿ ಹೈನುಗಾರಿಕೆಯನ್ನು ಅಳವಡಿಸಿಕೊಳ್ಳದೆ ಇದ್ದಿದ್ದರೆ ರೈತ ವರ್ಗದ ಬದುಕು ಸಂಕಷ್ಟ ಎದುರಿಸಬೇಕಾಗಿತ್ತು. ಸದ್ಯ ಹೈನುಗಾರಿಕೆ ರೈತರ ಕೈ ಹಿಡಿದು ಬದುಕಿಗೆ ಆಸರೆಯಾಗಿದೆಯೆಂದು ತಿಳಿಸಿದರು.

ಹತ್ತಾರು ಹಸುಗಳನ್ನು ಸಾಕುವ ಮೂಲಕ ಹೈನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳಿಗೆ ಸಾಲ ನೀಡಲು ಯಾರು ಸಹ ಹಿಂಜರಿಯುವುದಿಲ್ಲ. ಆರ್ಥಿಕ ಚೇತರಿಕೆ ವಿಚಾರದಲ್ಲಿ ಹೈನುಗಾರಿಕೆ ನಂಬಿಕೆಯ ಕಾಯಕವಾಗಿದೆ ಎಂದರು.

ನಿರ್ದೇಶಕರ ಹಾಗು ಉತ್ಪಾದಕರ ವಿಶ್ವಾಸ ಪಡೆದು ಮೇಲಾಧಿಕಾರಿಗಳ ಸಹಕಾರ ದೊಂದಿಗೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದೆಂದು ಭರವಸೆ ನೀಡಿದರು. ನೂತನ ಅಧ್ಯಕ್ಷೆ ಹಾಗೂ ನಿರ್ದೇಶಕರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು. ಕಾರ್ಯದರ್ಶಿ ಶೋಭಾ, ನಿರ್ದೇಶಕರಾದ ನಯನ, ರೂಪ, ಯಶೋಧಮ್ಮ, ಶೃತಿ, ಧನುಶ್ರೀ, ಜಯಲಕ್ಷ್ಮಮ್ಮ, ಮೀನಾಕ್ಷಿ, ಪುಷ್ಪಲತಾ ಹಾಗು ಇದ್ದರು.

## ಎಸ್‌ಸಿ-ಎಸ್‌ಟಿ ಕಾಂಗ್ರೆಸ್ ಮುಖಂಡರಿಗೆ ಸ್ಥಾನಮಾನ ನೀಡಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆ ಪರಿಶಿಷ್ಟಜಾತಿ-ಪಂಗಡದ ಕಾಂಗ್ರೆಸ್ ಮುಖಂಡರನ್ನು ಗುರುತಿಸಿ ನಾಮ ನಿರ್ದೇಶಿತ ವಿಧಾನ ಪರಿಷತ್ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಮುಖಂಡ ಮುನಿಸ್ವಾಮಿ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ನಾಲ್ಕೂವರೆ ಲಕ್ಷ ಪರಿಶಿಷ್ಟ ಮತಗಳಿದ್ದು, ಬಹುತೇಕರು ಕಾಂಗ್ರೆಸ್ ಪಕ್ಷ ಬೆಂಬಲಿಸಿದ್ದಾರೆ. ಇದೇ ಕಾರಣಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಿದೆ. ಈ ಸಮುದಾಯದ ಮುಖಂಡರಿಗೆ ಸರ್ಕಾರದಲ್ಲಿ ಸ್ಥಾನಮಾನ ನೀಡಲು ಸರ್ಕಾರ ವಿಫಲವಾಗಿದೆ. ಅದರಿಂದ ಹಲವು ವರ್ಷಗಳಿಂದ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿಯುತ್ತಿರುವ ಮುಖಂಡರು ಅಸಮಾಧಾನಗೊಂಡಿದ್ದಾರೆ. ಅವರಿಗೆ ಅನ್ಯಾಯವಾಗಿದೆ. ಈ ಸಂಬಂಧ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿ ಬೇರೆ ಬೇರೆ ಸಮುದಾಯಗಳಿಗೆ ಜಿಲ್ಲಾಧ್ಯಕ್ಷ, ನಿಗಮ ಮಂಡಳಿ ಹೀಗೆ ಅಷ್ಟೋ ಇಷ್ಟೋ ಅವಕಾಶ ಕಲ್ಪಿಸಲಾಗಿದೆ. ದಲಿತ ಮುಖಂಡರನ್ನು ಪರಿಗಣಿಸಿಲ್ಲ. ಇನ್ನಾದರೂ ಸಾಮಾಜಿಕ ನ್ಯಾಯದ ಆಶಯವನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗು ಪಂಗಡದ ಮುಖಂಡರಿಗೆ ನಾಮ ನಿರ್ದೇಶಿತ ವಿಧಾನ ಪರಿಷತ್ ಸ್ಥಾನ ಸೇರಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ನಾಮನಿರ್ದೇಶನ ಸ್ಥಾನಮಾನ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.

ಹೀಗೆ ಮಾಡಿದರೆ ಮುಂಬರುವ ಗ್ರಾಮ ಪಂಚಾಯಿತಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಸ್ಥಳೀಯ ಸಂಸ್ಥೆ, 2028ರ ವಿಧಾನಸಭೆ, 2029ರ ಲೋಕಸಭೆ ಚುನಾವಣೆಗಳಲ್ಲಿ ಅನುಕೂಲ ಆಗಲಿದೆ. ಈ ಕುರಿತು ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ಸಭೆ ನಡೆಸಿ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು. ದಲಿತರಿಗೆ ಸ್ಥಾನಮಾನ ಕೊಡದೇ ಇದ್ದರೆ ಪರಿಸ್ಥಿತಿ ಬೇರೆಯೇ ಆಗಲಿದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಎಸ್‌ಟಿ ಘಟಕದ ಬಿ.ಡಿ.ದೊಡ್ಡರಂಗಯ್ಯ, ಮುಖಂಡರಾದ ಕುಮಾರಸ್ವಾಮಿ, ಆಲೂರು ರಂಗಯ್ಯ ಇದ್ದರು.

## ನಕಲಿ ದಾಖಲಿ ಸೃಷ್ಟಿಸಿ ಪಿತ್ರಾರ್ಜಿತ ಆಸ್ತಿ ಕಬಳಿಕೆ ಆರೋಪ

• ಪ್ರಜೋದಯ ವರದಿ



**ಹಾಸನ:** ನಕಲಿ ದಾಖಲಿ ಸೃಷ್ಟಿಸಿ ಪಿತ್ರಾರ್ಜಿತ ಆಸ್ತಿ 3.25 ಎಕರೆ ಜಮೀನನ್ನು ಪೊಲೀಸ್ ಮುಖ್ಯ ಪೇದೆ ಜೆ.ಪಿ.ರಾಮಕೃಷ್ಣ ಕಬಳಿಕೆ ಮಾಡಿದ್ದಾರೆಂದು ಚನ್ನರಾಯಪಟ್ಟಣ ತಾಲ್ಲೂಕು ಜುಟ್ಟನಹಳ್ಳಿ ಗ್ರಾಮದ ಸಂತ್ರಸ್ತ ಪುಟ್ಟಸ್ವಾಮಿ ಅವರು ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಪವಿಭಾಗಾಧಿಕಾರಿ ನ್ಯಾಯಾಲಯ, ಸಿವಿಲ್ ಕೋರ್ಟ್ ಮೊದಲಾದ ಕಡೆಗಳಲ್ಲಿ ನನ್ನ ಪರವಾಗಿ ಆದೇಶವಾಗಿದ್ದರೂ ಜಮೀನು ಬಿಟ್ಟುಕೊಡದೆ ಒಂದಲ್ಲ ಒಂದು ರೀತಿಯ ತೊಂದರೆ ನೀಡುತ್ತಲೇ ಇದ್ದಾರೆ. ಪಹಣಿ ಮಾಡಿಕೊಡಿ ಎಂದು ನ್ಯಾಯಾಲಯವೇ ಆದೇಶ ಮಾಡಿದ್ದರೂ, ಸ್ಥಳೀಯ ಗ್ರಾಮಲೆಕ್ಕಾಧಿಕಾರಿ, ಕಂದಾಯ ಅಧಿಕಾರಿ ಹಾಗು ತಹಶೀಲ್ದಾರ್ ಹಣದ ಆಮಿಷಕ್ಕೆ ಬಲಿಯಾಗಿ ನನಗೆ ಪಹಣಿ ಮಾಡಿಕೊಡಲು ಸತಾಯಿಸುತ್ತಿದ್ದಾರೆಂದು ಅಳಲು ತೋಡಿಕೊಂಡರು.

ನಮ್ಮ ತಂದೆಯವರು ಸಂಪಾದನೆ ಮಾಡಿದ್ದ ಆಸ್ತಿಯನ್ನು ರಾಮಕೃಷ್ಣ ಅವರು ಕಬಳಿಸಿದ್ದಾರೆ. ಅದಕ್ಕಾಗಿ ನಾನು ಕಳೆದ 21 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇನೆ. ಈ ಸಂಬಂಧ ಕಂದಾಯ ಸಚಿವರು ಸೇರಿ ಎಲ್ಲಾ ಅಧಿಕಾರಿಗಳಿಗೂ ಮನವಿ ಸಲ್ಲಿಸಲಾಗಿದೆ. ಅವರು ಸೂಚಿಸಿದರೂ, ತಾಲ್ಲೂಕು ಮಟ್ಟದ ಅಧಿಕಾರಿಗಳು ಅಲೆಸುತ್ತಿದ್ದಾರೆ. ನನ್ನದೊಂದೇ ಅಲ್ಲ, ಗ್ರಾಮದಲ್ಲಿ ಹತ್ತಾರು ಎಕರೆ ಜಮೀನನ್ನು ರಾಮಕೃಷ್ಣ ನಕಲಿ ದಾಖಲೆ ಸೃಷ್ಟಿಸಿ ತಮ್ಮಂತೆ ಮಾಡಿಕೊಂಡಿದ್ದಾರೆ. ಸಮುದಾಯಭವನ, ಶಾಲೆ ಜಾಗವನ್ನೂ ಒತ್ತುವರಿ ಮಾಡಿದ್ದಾರೆ. ಪೊಲೀಸ್ ಇಲಾಖೆಯಲ್ಲಿದ್ದೂ ಕಾನೂನು ಉಲ್ಲಂಘನೆ ಮಾಡಿ ಬರೋಬ್ಬರಿ 30 ಪಹಣಿ ಹೊಂದಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ನನಗೆ ನ್ಯಾಯ ಕೊಡಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಮಂಜುನಾಥ್, ರವಿಕುಮಾರ್, ಅಣ್ಣಪ್ಪಗೌಡ, ಸುಂದರ್‌ರಾಜ್, ಸುನೀಲ್ ಇದ್ದರು.

# ನಶಾ ಮುಕ್ತ ಸಮಾಜ ನಿರ್ಮಾಣಕ್ಕೆ ಬೃಹತ್ ಜಾಗೃತಿ ಜಾಥಾ

» ಮೊದಲನೇ ಪುಟದಿಂದ



ಆರೋಗ್ಯ ಹಿಡಿ ಎಂಬ ಘೋಷಣೆಗಳ ಮೂಲಕ ಜಾಗೃತಿ ಮೂಡಿಸಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಗಾಂಜಾ ಸೇರಿ ವಿವಿಧ ಮಾದಕ ವಸ್ತುಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡುತ್ತಿರುವುದು ದುಃಖಕರ ಸಂಗತಿ. ಮುಂದಿನ ಪೀಳಿಗೆಗೆ ಸುರಕ್ಷಿತ ಹಾಗೂ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುವುದು ಸಮಾಜದ ಎಲ್ಲರ ಹೊಣೆಗಾರಿಕೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಶಾಮುಕ್ತ ಹಾಸನ ನಿರ್ಮಾಣಕ್ಕೆ ಯುವಕರು ಮುಂಚೂಣಿಯಲ್ಲಿ ನಿಲ್ಲಬೇಕು. ಮತ್ತೊಬ್ಬರ ಜೀವಕ್ಕೆ ನಾವು ಉಸಿರಾಗಬಹುದೆಂಬ ಸಂದೇಶದೊಂದಿಗೆ ಅಂಗಾಂಗ ದಾನವು ಅತ್ಯುತ್ತಮ ದಾನವಾಗಿದ್ದು, ಮತ್ತೊಬ್ಬರ ಜೀವಕ್ಕೆ ಉಸಿರಾಗುವ ಅವಕಾಶವನ್ನು ಒದಗಿಸುತ್ತದೆ. ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯನ್ನು ತಡೆಯಲು ಸಾರ್ವಜನಿಕರ ಸಹಕಾರ ಅಗತ್ಯವೆಂದು ತಿಳಿಸಿದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಆಶೀರ್ವಚನ ನೀಡಿ, ವ್ಯಕ್ತಿಯ ಆರೋಗ್ಯದಷ್ಟೇ ದೇಶದ ಆರೋಗ್ಯವೂ ಮುಖ್ಯವಾಗಿದ್ದು, ಪ್ರತಿಯೊಬ್ಬರೂ ನನ್ನ ಆರೋಗ್ಯದ ಜೊತೆಗೆ ಇತರರ ಆರೋಗ್ಯವನ್ನೂ ಕಾಪಾಡುತ್ತೇನೆಂಬ ಸಂಕಲ್ಪ ಮಾಡಬೇಕು. ಇಂದಿನ ಸಮಾಜದಲ್ಲಿ ಅಲ್ಪವಯಸ್ಸಿನ ಮಕ್ಕಳು ಮಾದಕ ವಸ್ತುಗಳ ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಭಗವಂತ ಕೊಟ್ಟ ಶಕ್ತಿಯನ್ನು ಸಮಾಜದ ಒಳಿತಿಗೆ ಬಳಸಿದಾಗ ಮಾತ್ರ ಜೀವನ ಸಾರ್ಥಕವಾ ಗುತ್ತದೆ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾ ಲಯದ ಉಪಕುಲಪತಿ ಬಿ.ಸಿ. ಭಗವಾನ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪದವಿ ಪಡೆಯಲು ಓದುತ್ತಿಲ್ಲ, ಆರೋಗ್ಯವಂತ ಮತ್ತು ಜವಾಬ್ದಾರಿಯುತ ನಾಗರಿಕರಾಗಿ ದೇಶ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆಂದು ತಿಳಿಸಿದರು.

ದೇಶದಲ್ಲಿ ಡ್ರಗ್ಸ್ ಬಳಕೆ ಆತಂಕಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದ್ದು, ಕೆಲವು ಅಧ್ಯಯನಗಳ ಪ್ರಕಾರ ಶೇ.30 ರಿಂದ 40 ರಷ್ಟು ಯುವಕರು ನಶೆ ಪದಾರ್ಥಗಳ ಬಳಕೆಯಲ್ಲಿ ತೊಡಗಿರು ವುದು ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ 40 ಸಾವಿರಕ್ಕೂ ಹೆಚ್ಚು ಜನರನ್ನು ವಾಕಥಾನ್ ಮೂಲಕ ಜಾಗೃತಿಗೊಳಿಸಲಾಗಿದ್ದು, ಹಾಸನ 10ನೇ ಜಿಲ್ಲೆಯಾಗಿ ಈ ಅಭಿಯಾನಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ, ಎನ್‌ಸಿಬಿ ಬೆಂಗಳೂರು ವಲಯದ ಇನ್ಸ್‌ಪೆಕ್ಟರ್ ವಿಕಾಸ್ ಸಿಂಗ್, ದಿಶಾ ಭೋದ್ ಫೌಂಡೇಶನ್ ನಿರ್ದೇಶಕ ಧ್ರುವಕುಮಾರ್, ಎಎಸ್‌ಪಿ ಶ್ರೀನಿಧಿ, ಸುರೇಶ್, ವಸಂತಶೆಟ್ಟಿ, ಡಾ.ರಾಮನಾಥ್, ಡಾ.ನಿತೀನ್, ಡಾ. ಶಶಿಕುಮಾರ್, ಡಾ. ಕಿರಣ್ ಕೆಂಪೇಗೌಡ ಸೇರಿ ಅನೇಕ ಗಣ್ಯರು ಉಪಸ್ಥಿತರಿದ್ದರು.

> **ಸ್ವಾಸ್ಥ ಭಾರತವೇ ಶ್ರೇಷ್ಠ ಭಾರತ. ಪ್ರತಿಯೊಂದು ಕುಟುಂಬವೂ ನಶಾಮುಕ್ತವಾಗಿರಬೇಕೆಂಬ ಸಂಕಲ್ಪ ಕೈಗೊಳ್ಳಬೇಕು. ದೇಶವನ್ನು ದುರ್ಬಲಗೊಳಿಸಲು ಯುದ್ಧ ವಷ್ಟೇ ಅಗತ್ಯವಿಲ್ಲ, ನಶೆ ಹಬ್ಬಿದರೂ ಸಾಕು.**
> **- ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

## ಯುವಸೇನಾ ಫೌಂಡೇಶನ್‌ನಿಂದ ಶ್ರಮದಾನ




• ಪ್ರಜೋದಯ ವರದಿ

**ಹಾಸನ:** ಮಹಾಶಿವರಾತ್ರಿ ಪ್ರಯುಕ್ತ ಧರ್ಮಸ್ಥಳಕ್ಕೆ ಪಾದಯಾತ್ರೆ ತೆರಳಿದ ಭಕ್ತಾಧಿಗಳು ರಸ್ತೆ ಬದಿ ಎಸೆದಿದ್ದ ಪ್ಲಾಸ್ಟಿಕ್ ಪದಾರ್ಥಗಳನ್ನು ಹಾಸನದ ಯುವಸೇನಾ ಫೌಂಡೇಶನ್ ಪದಾಧಿಕಾರಿಗಳು ಸಂಗ್ರಹಿಸಿ ಸ್ವಚ್ಛತೆಗೆ ಶ್ರಮಿಸಿದ್ದಾರೆ.

ಪ್ರತಿವರ್ಷ ಸಾವಿರಾರು ಭಕ್ತರು ರಾಜ್ಯದ ನಾನಾ ಮೂಲೆಗಳಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಬರುತ್ತಾರೆ. ಮಾರ್ಗಮಧ್ಯೆ ನೀರಿನ ಬಾಟಲಿ, ಆಹಾರ ಪೊಟ್ಟಣ, ಪ್ಲೇಟ್‌ಗಳನ್ನು ರಸ್ತೆಗೆ ಎಸೆ ಯುತ್ತಾರೆ. ಅದು ಪರಿಸರದ ಮೇಲೆ ವ್ಯಾಪಕ ಪರಿಣಾಮ ಬೀರುವುದನ್ನು ಅರಿತ ಯುವಸೇನಾ ಫೌಂಡೇಶನ್ ಪದಾಧಿಕಾರಿಗಳು, ಒಂದು ಆಟೋ ಮೂಲಕ ರಸ್ತೆ ಯುದ್ದಕ್ಕೂ ಸಂಚರಿಸಿ ಪ್ಲಾಸ್ಟಿಕ್ ಪದಾರ್ಥಗಳನ್ನು ಸಂಗ್ರಹಿಸಿದೆ.

ಹಾಸನದಿಂದ ಪ್ರಾರಂಭವಾದ ಈ ಕಾರ್ಯ ಬೇಲೂರು, ಚಾರ್ಮಾಡಿ ಘಾಟ್ ವರೆಗೆ ನಡೆಯಿತು. ರಸ್ತೆಯ ಎರಡೂ ಬದಿಯಲ್ಲಿ ಬಿದ್ದಿದ್ದ ತ್ಯಾಜ್ಯವನ್ನು ವಾಹನಕ್ಕೆ ತುಂಬಲಾಯಿತು. ಕೊಟ್ಟಿಗೆಹಾರ ತುರುವೆ ಗ್ರಾಮ ಪಂಚಾಯಿತಿ ಅಧ್ಯಕ್ಷ ರಘು, ಬಣಕಲ್ ಆರಿಫ್, ಯುವಸೇನಾ ಫೌಂಡೇಶನ್ ಅಧ್ಯಕ್ಷ ಪ್ರಭುಗೌಡ, ಉಪಾಧ್ಯಕ್ಷ ಜಗದೀಶ್, ಖಜಾಂಚಿ ಚೇತನ್, ಸೋಮು, ಮದನ್, ಹರೀಶ್ ಮತ್ತಿತರರಿದ್ದರು.

# ಬೀದಿ ದೀಪಗಳ ನಿರ್ವಹಣೆ ಮರೆತ ಬೇಲೂರು ಪುರಸಭೆ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಮುಖ್ಯರಸ್ತೆ ಹಾಗು ವಾರ್ಡ್‌ಗಳಲ್ಲಿ ಅಳವಡಿಸಿರುವ ಬೀದಿ ಕಂಬಗಳು ಸಾರ್ವಜನಿಕರಿಗೆ ಬೆಳಕು ನೀಡುವ ಬದಲು ಭಯ ಹುಟ್ಟಿಸುತ್ತಿವೆ.

ದೀಪಗಳ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಅಗತ್ಯ ಸ್ವಿಚ್ ವ್ಯವಸ್ಥೆ ಇಲ್ಲದಿರುವುದರಿಂದ ಅನೇಕ ಕಂಬಗಳು ನಿರಂತರವಾಗಿ ವಿದ್ಯುತ್ ಸಂಪರ್ಕ ಹೊಂದಿರುವ ಸ್ಥಿತಿಯಲ್ಲಿವೆ. ಪರಿಣಾಮ ಸಾರ್ವಜನಿಕರು ಹಾಗು ಜಾನುವಾರುಗಳು ಸಂಚರಿಸುವ ವೇಳೆ ಕಂಬಗಳಿಗೆ ಅಳವಡಿಸಿರುವ ವೈರ್ ತಾಗಿದರೆ ಅನಾಹುತ ಸಂಭವಿಸುವ ಭೀತಿ ಎದುರಾಗಿದೆ.

ಮುಖ್ಯವಾಗಿ ಹೊಳೆ ಬೀದಿ ಹಾಗು ಅದಕ್ಕೆ ಹೊಂದಿಕೊಂಡಿರುವ ಕನ್ನಿಕಾ ಪರಮೇಶ್ವರಿ ದೇವಾಲಯ ರಸ್ತೆ ಪ್ರದೇಶದಲ್ಲಿ ಸಮಸ್ಯೆ ಗಂಭೀರವಾಗಿದೆ. ಈ ರಸ್ತೆಯಲ್ಲಿ ಅಂಗನವಾಡಿ ಕೇಂದ್ರವೂ ಇರುವುದರಿಂದ ಮಕ್ಕಳ ಸುರಕ್ಷತೆ ಬಗ್ಗೆ ಪೋಷಕರಲ್ಲಿ ಆತಂಕ ಹೆಚ್ಚಾಗಿದೆ. ಅಂಗನ ವಾಡಿ ಎದುರಿನ ಕಂಬದಲ್ಲಿ ಸ್ವಿಚ್ ಇಲ್ಲದೇ ತಂತಿಗಳು ಹೊರಗೆ ಎಳೆದಿರುವುದು ಕಂಡುಬಂದಿದೆ. ಇದೇ ರೀತಿ ಹೊಳೆ ಬೀದಿಯ ರಾಗಿ ಮಿಲ್‌ನ ಮುಂಭಾಗ, ಹಳೆ ಅಂಚೆ ರಸ್ತೆ ಹಾಗು ತಿರುವು ರಸ್ತೆಗಳಲ್ಲಿಯೂ ಹಲವು ಕಂಬಗಳಲ್ಲಿ ರಕ್ಷಣಾ ಮುಚ್ಚಳ ವಿಲ್ಲದೆ ವೈರ್‌ಗಳು ಬಯಲಿಗೆ ಕಾಣಿಸುತ್ತಿವೆ.

ಈ ಭಾಗದಲ್ಲಿ ಹಲವು ಶಾಲಾ-ಕಾಲೇಜುಗಳಿದ್ದು, ಪ್ರತಿದಿನ ಸಾವಿರಾರು ವಿದ್ಯಾರ್ಥಿ ಹಾಗು ಸಾರ್ವಜನಿಕರು ಸಂಚರಿಸುತ್ತಾರೆ. ಇಂತಹ ಪ್ರಮುಖ ರಸ್ತೆಗಳಲ್ಲೇ ಸುರಕ್ಷತಾ ಕೊರತೆ ಕಂಡು ಬರುತ್ತಿರುವುದು ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಇಂತಹ ಕಂಬಗಳಿಂದ ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂಬುದು ನಾಗರಿಕರ ಪ್ರಶ್ನೆಯಾಗಿದೆ.

ಪಟ್ಟಣದಲ್ಲಿ 150ಕ್ಕೂ ಹೆಚ್ಚು ಕಂಬಗಳಲ್ಲಿ ಇದೇ ರೀತಿಯ ಸಮಸ್ಯೆ ಇರುವುದಾಗಿ ತಿಳಿದು ಬಂದಿದೆ. ಕೆಲವು ಕಂಬಗಳಲ್ಲಿ ರಕ್ಷಣಾ ಬಾಕ್ಸ್ ಇಲ್ಲದೇ ತಂತಿಗಳು ಹೊರಗೆ ಕಾಣಿಸುತ್ತಿರುವುದು ಮಕ್ಕಳಿಗೆ ಹಾಗು ಹಿರಿಯರಿಗೆ ಅಪಾಯಕಾರಿಯಾಗಿದೆ. ಅನಾಹುತ ಸಂಭವಿಸಿದಲ್ಲಿ ನಿರ್ವಹಣೆ ವಹಿಸಿಕೊಂಡಿರುವ ಗುತ್ತಿಗೆದಾರರು ಹಾಗೂ ಪುರಸಭೆ ನೇರ ಹೊಣೆಗಾರರಾಗಬೇಕಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ಕುರಿತು ಪುರಸಭೆ ಸದಸ್ಯ ಜಮಾಲುದ್ದೀನ್ ಅವರು ಮಾತನಾಡಿ, ಪುರಸಭೆ ವತಿಯಿಂದ ಯೋಗೇಶ್ ಅವರಿಗೆ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆ ನೀಡಲಾಗಿದೆ. ಈಗಾಗಲೇ ನಾನು ಹಾಗು ಇತರ ಸದಸ್ಯರು ಗಮನಕ್ಕೆ ತಂದಿದ್ದೇವೆ. ನನ್ನ ವಾರ್ಡ್ ಮಾತ್ರವಲ್ಲದೆ 23 ವಾರ್ಡ್‌ಗಳಲ್ಲಿಯೂ ಇದೇ ಸಮಸ್ಯೆ ಇದೆ. ಏನಾದರೂ ಅನಾಹುತ ಸಂಭವಿಸಿದೆ ಗುತ್ತಿಗೆದಾರರೇ ನೇರ ಹೊಣೆಗಾರರಾಗುತ್ತಾರೆ. ಈ ವಿಷಯವನ್ನು ಪುರಸಭೆ ಸಭೆಯಲ್ಲಿ ಪುನಃ ಪ್ರಸ್ತಾಪಿಸಿ, ಶೀಘ್ರದಲ್ಲೇ ತ್ರಿಫೇಸ್ ವೈರ್ ಹಾಗು ಸ್ವಿಚ್ ವ್ಯವಸ್ಥೆಯನ್ನು ಸರಿಪಡಿಸುವಂತೆ ತಿಳಿಸುತ್ತೇನೆಂದರು.

## ಫೆ.21ಕ್ಕೆ ಸರಿಗಮಪ ಲಿಟಲ್ ಚಾಂಪ್ಸ್ ಆಡಿಷನ್

• ಪ್ರಜೋದಯ ವರದಿ

**ಹಾಸನ:** ಕನ್ನಡದ ಜನಪ್ರಿಯ ಜೀ ಕನ್ನಡ ವಾಹಿನಿ ನಡೆಸಿಕೊಡುವ ಸರಿಗಮಪ ಲಿಟಲ್ ಚಾಂಪ್ಸ್ ಆಡಿಷನ್ ಫೆ.21ರ ಶನಿವಾರ ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾ ಶಾಲೆಯಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 9ರಿಂದ ಆಡಿಷನ್ ಆರಂಭವಾಗಲಿದ್ದು, 3 ರಿಂದ 15 ವರ್ಷಗೊಳಗಿನ ಮಕ್ಕಳು ಭಾಗವಹಿಸಬಹುದು. 3 ವಿಭಿನ್ನ ಹಾಡುಗಳನ್ನು ಪ್ರಸ್ತುತಪಡಿಸಬೇಕು. ಭಾಗವಹಿಸುವ ಮಕ್ಕಳು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗು ವಿಳಾಸ ಪ್ರತಿ ತಲುಪಿಸಬೇಕು. ಆಡಿಷನ್ ಸಂಪೂರ್ಣ ಉಚಿತವಾಗಿದ್ದು, ಯಾವುದೇ ರೀತಿಯ ಶುಲ್ಕ ಪಾವತಿಸುವಂತಿಲ್ಲ ಎಂದು ತಿಳಿಸಿದೆ.



**ಪುದುಚೇರಿಯ ಕಂಬನ್ ಕಲೈ ಆರಂಗಂನಲ್ಲಿ ಇತ್ತೀಚೆಗೆ ನಡೆದ 2025-26ರ 11ನೇ ರಾಷ್ಟ್ರೀಯ ಕ್ರೀಡಾ ನೃತ್ಯ ಚಾಂಪಿಯನ್ ಶಿಪ್‌ನಲ್ಲಿ ಹಾಸನದ ವಿಜಯ ಶಾಲೆಯ 2ನೇ ತರಗತಿ ವಿದ್ಯಾರ್ಥಿನಿ ಜನ್ಯ ಡಿ.ಗೌಡ ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಶಾಲಾ ಆಡಳಿತ ಮಂಡಳಿ ವಿದ್ಯಾರ್ಥಿನಿಯ ಸಾಧನೆಗೆ ಅಭಿನಂದಿಸಿದೆ.**

## ಲಿಂಗತ್ವ ಅಲ್ಪಸಂಖ್ಯಾತರಿಗೆ ವಿಶೇಷ ಪ್ಯಾಕೇಜ್‌ಗೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಕೊಟ್ಟ ಮಾತಿನಂತೆ ರಾಜ್ಯ ಸರ್ಕಾರ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗೆ 200 ಕೋಟಿ ರೂ. ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿ ರಾಜ್ಯ ಸಮಿತಿ ಸದಸ್ಯೆ ಮೋನಿಕಾ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 2023ರ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಲೈಂಗಿಕ ಅಲ್ಪಸಂಖ್ಯಾತರು ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 2ನೇ ಅವಧಿಯ ಮೂರನೇ ಬಜೆಟ್ ಮಂಡಿಸಲು ತಯಾರಿ ನಡೆಸುತ್ತಿದ್ದು, ಲೈಂಗಿಕ ಅಲ್ಪಸಂಖ್ಯಾತರ ಹಿತಾಸಕ್ತಿ ಕಾಪಾಡಬೇಕೆಂದು ಆಗ್ರಹಿಸಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು. ಜಿಲ್ಲಾ ಹಾಗು ತಾಲ್ಲೂಕು ಕೇಂದ್ರಗಳಲ್ಲಿ ವಸತಿ ನಿಲಯ ಮತ್ತು ಶೆಲ್ಟರ್ ನಿರ್ಮಿಸಬೇಕು. ಪ್ರತಿವರ್ಷ 200 ಮನೆಗಳನ್ನು ನಿರ್ಮಿಸಿಕೊಡಬೇಕು. ವ್ಯವಸಾಯದಲ್ಲಿ ಆಸಕ್ತಿ ಹೊಂದಿರುವ ಲೈಂಗಿಕ ಅಲ್ಪಸಂಖ್ಯಾತರಿಗೆ ಅಗತ್ಯ ಭೂಮಿ ಮಂಜೂರು ಮಾಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ವಿನ್ಸಿತಾ, ಮಾರತಮ್ಮಾ, ಭಾಗ್ಯ ಮೇರಿ, ಶಿವಣ್ಣ ಮತ್ತಿತರರಿದ್ದರು.

### ಆಲೂಗೆಡ್ಡೆ ಸಂಶೋಧನಾ ಕೇಂದ್ರಕ್ಕೂ ಒತ್ತಾಯ | ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಂದ ಕೇಂದ್ರಕ್ಕೆ ಕೋರಿಕೆ

# ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆಗೆ ಯತ್ನ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯಲ್ಲಿ ವೈದ್ಯಕೀಯ, ಇಂಜಿನೀಯರಿಂಗ್, ಕೃಷಿ, ಹಾಸನ ವಿಶ್ವವಿದ್ಯಾಲಯ ಇರುವಂತೆ ತೋಟಗಾರಿಕೆ ಕಾಲೇಜು ಸ್ಥಾಪನೆಯ ಅಗತ್ಯತೆಯನ್ನು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು, ಒತ್ತಾಯ ಮಾಡಿದ್ದಾರೆ.

ಆಲೂಗೆಡ್ಡೆ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದೆ. ಹೀಗಾಗಿ ತೋಟ ಗಾರಿಕೆ ಕಾಲೇಜಿನ ಜೊತೆಗೆ ಪ್ರಾದೇಶಿಕ ಐಸಿಎಆರ್‌ಸಿಪಿ ಆಲೂಗೆಡ್ಡೆ ಸಂಶೋಧನಾ ಕೇಂದ್ರ ಸ್ಥಾಪನೆಗೆ ಮನವಿ ಮಾಡಿ, ಕೇಂದ್ರ ತೋಟ ಗಾರಿಕಾ ಸಚಿವರನ್ನು ದೇವೇಗೌಡರು ಭೇಟಿ ಮಾಡಿ, ತೋಟ ಗಾರಿಕೆ ಕಾಲೇಜು, ಆಲೂಗೆಡ್ಡೆ ಸಂಶೋಧನ ಕೇಂದ್ರದ ಸ್ಥಾಪನೆಗೆ ಒತ್ತಾಯ ಮಾಡಿ ಮನವಿ ಸಲ್ಲಿಸಿದ್ದಾರೆ.

ಮಲೆನಾಡು, ಅರೆಮಲೆನಾಡು, ಬಯಲು ಸೀಮೆ ಹೀಗಿ ಮೂರು ವಿಭಿನ್ನ ಕೃಷಿ ಹವಾ ಮಾನ ವಲಯಗಳನ್ನು ಹೊಂದಿರುವುದರಿಂದ ವಿವಿಧ ವಾಣಿಜ್ಯ ತೋಟಗಾರಿಕೆ ಬೆಳೆಗಳಿಗೆ ಅನುಕೂಲಕರ ಪ್ರದೇಶವಾಗಿದೆ. ಜಿಲ್ಲೆಯಲ್ಲಿ ಸುಮಾರು 1.86 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಸಲಾಗುತ್ತಿದೆ. ಇದು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.28 ರಷ್ಟು ಹಾಗು ಒಟ್ಟು ಕೃಷಿ ಯೋಗ್ಯ ಭೂಮಿಯ ಶೇ.43ರಷ್ಟು ಆಗಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ತೆಂಗು, ಅಡಿಕೆ, ಬಾಳೆ, ಮಾವು, ದಾಳಿಂಬೆ, ಆಲೂಗೆಡ್ಡೆ, ಟೊಮ್ಯಾಟೋ, ಹಸಿ ಮೆಣಸಿನಕಾಯಿ ಸೇರಿ ವಿವಿಧ ತರಕಾರಿ ಹಾಗು ಹೂ ಬೆಳೆಗಳನ್ನು ಬೆಳೆ ಯಲಾಗುತ್ತಿದೆ. ಉತ್ತಮ ಉತ್ಪಾದನಾ ಸಾಮರ್ಥ್ಯದ ಜೊತೆಗೆ ಬೆಂಗಳೂರು ಸೇರಿ ಪ್ರಮುಖ ಮಾರುಕಟ್ಟೆಗಳಿಗೆ ಸುಲಭ ಸಂಪರ್ಕ ಇರುವು ದರಿಂದ ರೈತರು ವಾಣಿಜ್ಯ ತೋಟಗಾರಿಕಾ ಬೆಳೆಗಳನ್ನು ಯಶಸ್ವಿಯಾಗಿ ಕೈಗೊಳ್ಳುತ್ತಿದ್ದಾರೆ.

ಈ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸಲು ಸೋಮನಹಳ್ಳಿ ಕಾವಲು ತೋಟಗಾರಿಕಾ ಫಾರ್ಮ್, ಹಾಸನದಲ್ಲಿ 100 ಏಕರೆ ಪ್ರದೇಶ ದಲ್ಲಿ ಹೊಸ ತೋಟಗಾರಿಕೆ ಕಾಲೇಜು ಸ್ಥಾಪನೆ ಗಾಗಿ 2019ರಲ್ಲಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಾಲೇಜು ನಿರ್ಮಾಣಕ್ಕೆ ರಾಜ್ಯ ಸರ್ಕಾರವೂ ಆದೇಶ ಹೊರಡಿಸಲಾಗಿದೆ. ಅನೇಕ ಕಾರಣಗಳಿಂದ ಯೋಜನೆ ಇನ್ನೂ ಜಾರಿಗೆ ಬಂದಿಲ್ಲ.

**ಅಗತ್ಯ ಭೂಮಿ ಲಭ್ಯ**

ಸೋಮನಹಳ್ಳಿ ಕಾವಲು ತೋಟಗಾರಿಕಾ ಫಾರ್ಮ್ ಒಟ್ಟು 377ಏಕರೆ ವಿಸ್ತೀರ್ಣ ಹೊಂದಿದೆ. ಅದರಲ್ಲಿ 50ಏಕರೆ ಪ್ರದೇಶ ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನ ಗಳ ವಿಶ್ವವಿದ್ಯಾಲಯದ ವಶದಲ್ಲಿದೆ. ಅಲ್ಲಿ ತೋಟಗಾರಿಕಾ ಸಂಶೋಧನಾ ಹಾಗು ವಿಸ್ತರಣಾ ಕೇಂದ್ರವು ಆಲೂಗೆಡ್ಡೆ ಬೆಳೆ ಕುರಿತು ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ. ಮತ್ತೊಂದು 20 ಏಕರೆ ಪ್ರದೇಶದಲ್ಲಿ ರಕ್ಷಿತ ಬೆಳೆಗಾರಿಕೆಗೆ ಸಂಬಂಧಿಸಿದ ಉತ್ಕೃಷ್ಟತಾ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಉಳಿದ 307 ಏಕರೆ ಪ್ರದೇಶ ದಲ್ಲಿ ವಿವಿಧ ತೋಟ ಗಾರಿಕಾ ಚಟುವಟಿಕೆಗಳು ನಡೆಯುತ್ತಿದ್ದು, ಅದರಲ್ಲಿ 77 ಏಕರೆ ಪ್ರದೇಶವನ್ನು ತೋಟಗಾರಿಕೆ ಕಾಲೇಜು ಪ್ರಾರಂಭಿಸಲು ವಿಶ್ವವಿದ್ಯಾ ಲಯಕ್ಕೆ ಹಸ್ತಾಂತರಿಸಲು ಸಾಧ್ಯವಿದೆ.

**ಆಲೂಗೆಡ್ಡೆ ಸಂಶೋಧನಾ ಕೇಂದ್ರ ಅವಶ್ಯ**

ಈ ಹಿಂದೆ ಆಲೂಗೆಡ್ಡೆ ಉತ್ಪಾದನೆಯಲ್ಲಿ ಹಾಸನ ಜಿಲ್ಲೆ ಪ್ರಮುಖ ಸ್ಥಾನದಲ್ಲಿತ್ತು. 2005 - 06ರಲ್ಲಿ ಜಿಲ್ಲೆಯಲ್ಲಿ ಸುಮಾರು 45,000 ರಿಂದ 50,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆಸಲಾಗುತ್ತಿತ್ತು. ಅಂಗಮಾರಿ ರೋಗದ ವ್ಯಾಪಕ ಹರಡುವಿಕೆ ಮತ್ತು ಇತರೆ ಸಮಸ್ಯೆಗಳ ಪರಿಣಾಮವಾಗಿ ಪ್ರಸ್ತುತ ಆಲೂಗೆಡ್ಡೆ ಬೆಳೆ ಪ್ರದೇಶವು 5 ಸಾವಿರದಿಂದ 7ಸಾವಿರ ಹೆಕ್ಟೇರೆಗೆ ಇಳಿಕೆಯಾಗಿದೆ.

ಈ ಹಿನ್ನಲೆ ಸೋಮನಹಳ್ಳಿ ಕಾವಲು ತೋಟಗಾರಿಕಾ ಫಾರ್ಮ್‌ನಲ್ಲಿ ಈಗಾಗಲೇ ಆಲೂಗೆಡ್ಡೆ ಬೆಳೆ ಕುರಿತು ಸಂಶೋಧನಾ ಕಾರ್ಯಗಳು ನಡೆಯುತ್ತಿದ್ದರೂ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾದ ವಿಶಿಷ್ಟ ಹಾಗು ವಿಸ್ತೃತ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಅಗತ್ಯವಿದೆ. ಆದ್ದರಿಂದ, ಐಸಿಎಆರ್-ಸಿಪಿಆರ್‌ಐ (ಆಲೂಗೆಡ್ಡೆ ಸಂಶೋಧನಾ ಕೇಂದ್ರ) ಸಹಯೋಗದಲ್ಲಿ ಜಿಲ್ಲೆಯಲ್ಲಿ ಪ್ರಾದೇಶಿಕ ಆಲೂಗೆಡ್ಡೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿದೆ.

### ಕೇಂದ್ರ ಸಚಿವರಲ್ಲಿ ಅನುದಾನಕ್ಕೆ ಮನವಿ

**ಜಿಲ್ಲೆಯ ರೈತ ಸಮುದಾಯ ಹಾಗು ರೈತರ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಸೋಮನಹಳ್ಳಿ ಕಾವಲು ತೋಟಗಾರಿಕಾ ಫಾರ್ಮ್‌ನಲ್ಲಿ ಹೊಸ ತೋಟಗಾರಿಕೆ ಕಾಲೇಜು ಮತ್ತು ಪ್ರಾದೇಶಿಕ ಆಲೂಗೆಡ್ಡೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಅಗತ್ಯ ಅನುದಾನ ಮಂಜೂರು ಮಾಡಿ, ಯೋಜನೆ ಜಾರಿಗೆ ತರಲು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು ಕರ್ನಾಟಕ ರಾಜ್ಯ ಸರ್ಕಾರಕ್ಕೆ ತಕ್ಷಣ ನಿರ್ದೇಶನ ನೀಡಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕೇಂದ್ರ ಕೃಷಿ ಮತ್ತು ತೋಟಗಾರಿಕೆ ಸಚಿವ ಶಿವರಾಜ್ ಸಿಂಗ್ ಚೌಹಣ್ ಅವರಲ್ಲಿ ಮನವಿ ಮಾಡಿದ್ದಾರೆ.**

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019